ಲಬ್ಧಿ ದೀಕ್ಷಾ ಶತಾಬ್ಧಿ ಗ್ರಂಥಮಾಲಾ – 6

LABDHI DIKSHA SHATABDI GRANTHMALA - 6

ಜೈನಮ್ ಜಯತಿ ಶಾಸನಮ್

ಜೈನಧರ್ಮದ ರೂಪರೇಷೆಗಳು

(Kannada)

Published on occasion of

50 th Swargarohan Anniversary of

Labdhi Sooreeshwarjee M.S.

25th Swargarohan Anniversary of

Vikram Sooreeshwarjee M.S.

25th Acharypad Anniversary of

Rajyash Sooreeshwarjee M.S.

ಮೂಲ ಲೇಖಕರು :

ಭರೂಚ್ ತೀರ್ಥೋದ್ಧಾರ ಮಾರ್ಗದರ್ಶಕ, ಬನಾರಸ
ವಿದ್ವಾನ್ ಗಣಿವರ್ಯ ಕಲ್ಪಜ್ಞ, ಉವಸಣ್ಣಹರಮ್ ಹಾಗೂ
ಗೋಡಿಜಿ ತೀರ್ಥೋದ್ಧಾರಕ

ಆಚಾರ್ಯ ರಾಜಯಶ ಸೂರೀಶ್ವರಜಿ ಮ.ಸಾ.

DONORS

1. Smt.Chandravati Parasmalji Punmiya, Bangalore
2. Sanghavi Jeetmal Kundanmalji Dantewadia Pariwar, Bangalore/Mandawala
3. Pyaribai Umedmalji Khoda- m/s. Mangaldeep, Belgaum
4. Shambhumalji Kantilalji Sanghavi Kataria (Jitendra,Rajesh,Khushboo,Charu) Bangalore Padru
5. Nagarthpet Chaturmas Samiti, Bangalore
6. Sha Jutmal Premraj & Co. Bangalore
7. Foram Mihir Gandhi (M.Sc. IT.), Hosur Bangalore

Tenth edition	(Tam)	1998	5,000
Twelveth edition	(Tel)	2008	3000
Thirteenth edition	(Eng)	2011	5,000
Fourteenth edition	(Kan)	2011	2,500

PUBLISHER'S NOTE

We have pleasure in bringing out an English edition of our popular book which was originally published in Gujarati under the name "JAIN DHARMANI ROOPREKHA"

The demand for repeated Gujrati and Hindi edition proves the popularity of this book. Its lucid-writing and simple style have made it a favourite of readers.

The need for an English edition of this book for benefit of people residing in South India or abroad was felt by us.

We are thankful to all those who have devoted their valuable time, precious effort and rendered financial assistance to make this venture a success.

We are confident that we will get their continuous support.

As Acharya Dev is very busy with other responsibilities, his zealous disciple Upadhyaya Vishrutyash Vijay Gani does his best to bring out such valuable publications with addition and up-

dated informations. We pray to him to continue his efforts to enlighten us.

This is the third edition in English which is being sponsored by several Philanthoropists on the occassion of ADINATH PRATISHTHA, which will be held on Nov 30, 2011 at Chickpet, Bangalore. Their munificence is to be appreciated.

Setu.S.Shah
C/o L.V.A.Humanitarian Charitable Trust
Uma Timber Traders Compound, Opp.Surya Plaza.
Nr. Bhattar Char Rasta,
U.M.Road-395017
Tel-9727764111

RAJENDRA A. DALAL
(Secunderabad)
Shree Labdhi Vikram Soreeshwarjee Sanskruti Kendra
T/7/A, Shantinagar, Vikram Soreeshwarjee Marg,
Ashram Road.
Ahmedabad-380 013

You could feed back your responses to.
1. labdhivikram@gmail.com
2. profmaharaj@yahoo.co.in
3. profmaharaj01@gmail.com

Visit us : www.labdhivikramraj.org

THE AUTHOR

Revered Acharyadev **Shri. Rajyash Sooreeshwarjee Maharaj,** exponent of discourses, visionary and promoter of the renovation of various temples, the epitome of renunciation a great preacher is blessed by **Shri. Labdhi Sooreeshwarjee M.S.** & **Shri. Vikram Sooreeshwarjee,M.S.** his Grand Guruji and Guruji respectively.

Shri. Vikram Sooreeshwarjee, his Gurudev was very effective in attracting people towards the virtues of Jainism. He was a worshipper of **'BHAKTAMAR MAHASTOTRA',** the practitioner of high standard of sadhana, and was a very simple minded soul.

The Author-Shri.**Rajyash Soorijee**-a highly dedicated, courteous disciple of his Guru and lucky enough to serve, care, worship incessantly to such a great Guru.

Being a great personality, his bright and exalted oratory attracts the people at the very first sight. Infact, few seconds in his auspicious company, confers profound happiness and satisfaction. Deeply

involved in various rites, rituals & disciplines. Very compassionate towards everyone, he has a heart, very simple like a child and delicate like a flower.

He has suggested many novice ways for the propagation of Jainism. It is the outcome of his magnetic personality and devotion to God, that the renovation of temples at **Bharuch Teerth, Kulpak Teerth, Uvasaggaharam Teerth,The Great Teerth of Banaras (**Birth Kalyanak Place of Lord Parshwanath**),Godi Parshwa-Padmavati Teerth at Prerna Teerth, Ahmedabad-** jirnoddhar of Simandhar Swami and Jagvallabh Parshwanath Teerth at Vadachowta, Surat were made possible. With his blessings, the following penances were also undertaken,-

* Fastings by 237 people for one month continuously (**MASAKSHAMAN**) and
* Fastings by 1008 people for 3 days (TELA) at Chennai.
* 360 people undertook the SIDDHITAP at Bangalore.

He organised JAINFAIR at Chennai, which was an epoch making event. His dedication devotion and involvement for the event are beyond words

of appreciation.

Jirnoddhar of Vanachara Teerth near Baroda, and many new Teerths are being Established under the Nishra and guidelines of **Shri. Rajyash Sooreeshwarjee Maharaj in** India.

- Upadhyaya Vishrutyash Vijaya Gani
Dt. 20.08.2011

> *The way to happiness is to be content with whatever you have, rather than crave for what you have not.*

Books available from:

Kumar, Bangalore - 9036381255

Bharatbhai, Bangalore - 9448365738

Dineshbhai, Bangalore - 9964569303

Devkumar, Bangalore - 9844832791

Bangalore Jain Seva Mandal- Mob: 9448462049

PREFACE TO THE FIRST EDITION

by- Acharya Sri Rajayash Sooreeshwarjee Maharaj Saheb

I am indebted to Acharya Dev**Jayant Sooreeshwarjee Maharaj** Saheb for inspiring me to write this book. This renowned preceptor had an ardent desire to impart knowedge to the people. None of the visiting devotees would go without receiving knowledge, as a gift from him.

His famous phrase of life was "Chakor ne takor" (a Gujarati phrase)- " spontaneous response to a stimulus". He himself was stimulated by the words. "If you serve Acharya Dev **Kamalsooree - shwarjee** Maharaj, your life will be worthy." Hearing this, he served him devotedly and there was great transformation in his life.

The book prepared under his instruction is still popular, even 35years after his demise. Today I respectfully remember him. Under his tutelage, it was for me a carefree life as there was no direct responsiblity and whatever I desired to do was to be done under the shelter of the elders.

I bless my most obedient **Upadhyaya Vishrutyash Vijay Gani,** as the updated publication is the result of his untiring efforts.

Bangalore *August 20, 2011.*

ಮುನ್ನುಡಿ

ಆಚಾರ್ಯದೇವ ರಾಜಯಶ್ ಸುರೀಶ್ವರಜಿಯವರು ರಚಿಸಿದ ಈ ಕೃತಿಯು ಜೈನ ಧರ್ಮದ ಸಂಕ್ಷಿಪ್ತ ಚಿತ್ರಣವನ್ನು ಕೊಡುವುದು. ಇಂತಹ ಒಂದು ಕೃತಿಗೆ ಮುನ್ನುಡಿ ಬರೆಯಲು ನನಗೆ ತುಂಬಾ ಸಂತೋಷವಾಗುತ್ತಿದೆ.

ನಿಜವಾದ ದೇವರು ಯಾರು? ಮೋಹ ಹಾಗೂ ದ್ವೇಷ ಇವುಗಳಿಂದ ಮುಕ್ತನಾಗಿರುವವನೇ ನಿಜವಾದ ದೇವರು. ಇವುಗಳಿಂದ ಮುಕ್ತನಾಗದೆ ಜ್ಞಾನವನ್ನು ಪ್ರಾಪ್ತ ಮಾಡುವುದು ಅಸಾಧ್ಯ. ಪರಿಪೂರ್ಣವಾದ ಜ್ಞಾನ ಹಾಗೂ ಸರ್ವಜ್ಞತೆಯೇ ಆಗಿರುವುದು. ದ್ವೇಷ ಹಾಗೂ ಅವಿವೇಕತನಗಳನ್ನು ದೂರವಿರಿಸುವವನೇ ನಿಜವಾದ ದೇವರು. ಆಂತಿಕ ಆಂತರಿಕ ಶತೃಗಳನ್ನು ನಿರ್ನಾಮಗೊಳಿಸುವುದೇ ಶ್ರೇಷ್ಠವಾದ ಜೀವಾತ್ಮವು "ಅರಿಹಂತ್" ವೇ ನಿಜವಾದ ದೇವರು. ಸರ್ವ ಆಂತರಿಕ ಶತ್ರುಗಳನ್ನು ಜಯಿಸಿದ ಜೀವಾತ್ಮವೇ "ಜಿನ" – "ಜಿನೇಶ್ವರ್" ನಮ್ಮ ಆಂತರಿಕ ಶತೃಗಳಾದ ಮೋಹ, ದೇಷ ಹಾಗೂ ಅವಿವೇಕತನವನ್ನು ಜಯಿಸಿದ ಶ್ರೇಷ್ಠ ಜೀವಾತ್ಮಗಳೇ "ಅರಿಹಂತ್" "ಜಿನಾಸ್" ಅಥವಾ "ತೀರ್ಥಂಕರರು" ಸಾಧಾರಣವಾದ ಆತ್ಮವನ್ನು ಶ್ರೇಷ್ಠ ಜೀವಾತ್ಮವಾಗಿ ಪರಿವರ್ತನೆಗೊಳಿಸಲು ಮಾರ್ಗದರ್ಶನ ಮಾಡುವವರು ಯಾರು ಇಂಥ ಭಗವಂತನಲ್ಲಿ ವಿಶ್ವಾಸವಿರಿಸುವವರೋ ಅವರೇ "ಜಿನಾ" ಅಥವಾ "ಜೈನ್". ಜೈನ ಧರ್ಮಕ್ಕೆ ಜಾತಿಭೇದವಿಲ್ಲ. ಮತಾಭಿಪ್ರಾಯಗಳೂ ಇಲ್ಲ. ಪ್ರತಿಯೊಂದು ಆತ್ಮವೂ ಶ್ರೇಷ್ಠ ಜೀವಾತ್ಮಗೊಳ್ಳಬಹುದು ಎಂಬುದನ್ನು ಈ ಕೃತಿಯ ಲೇಖಕರು ಸಮರ್ಪಕವಾಗಿ ಸೂಚಿಸಿರುವರು. ಈ ಪುಸ್ತಕದ ಲೇಖಕರ ಅಭಿಪ್ರಾಯದಂತೆ ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಇದು ಜೈನ ಧರ್ಮದಲ್ಲಿ ಇರುವ ದೇವರ ಕಲ್ಪನೆ.

ನಂತರ ಲೇಖಕರು ನಿಜವಾದ ಗುರುವಿನತ್ತ ನಮ್ಮ ಗಮನವನ್ನು ಹರಿಸುವರು. ಅವನು (ಅವಳು) ಅನಿಕೇತನ (ಮನೆಯನ್ನು ತೊರೆದವನು) (ಅನಗಾರ), ಸಿರಿಸಂಪತ್ತು ಇಲ್ಲದವನು ಹಾಗೂ ಸಂಬಂಧಗಳಿಂದ ಬೇರ್ಪಟ್ಟವನು. ಅಖಂಡ ವಿಶ್ವದ ದೊಡ್ಡ ಅಥವಾ ಚಿಕ್ಕ. ಇಂದ್ರಿಯ ಗ್ರಾಹ್ಯವಾದುದೋ, ಇಂದ್ರಿಯ ಗ್ರಾಹ್ಯವಾಗಿರದೆ ಇರುವುದೋ ಅಂಥ ಎಲ್ಲಾ ಆತ್ಮಗಳ ಕಲ್ಯಾಣವನ್ನು ಇವನು ಬಯಸುವನು. ಇದುವೇ ಗುರುವಿನ ನಿಜವಾದ ಚೈತನ್ಯ, ಉತ್ಸಾಹ ಎಂದು ಲೇಖಕರು ಹೇಳುತಾರೆ. ನಿಜವಾದ ಸನ್ಯಾಸಿಗೆ ಮನಸ್ಸು, ನುಡಿ ಹಾಗೂ ಶರೀರದ ಮೇಲೆ ನಿಯಂತ್ರಣವಿರುತ್ತದೆ. ಚಿಕ್ಕದೇ ಆಗಿರಲಿ ದೊಡ್ಡದೇ ಆಗಿರಲಿ ವಿಶ್ವದ ಪ್ರತಿಯೊಂದು ಜೀವಿಗಳಿಗೆ ಸ್ನೇಹ ಭಾವನೆಯ ಆಶ್ರಯವನ್ನು ಗುರುವು ಕೊಡುವನು ಅವನು ಯಾವಾಗಲೂ ಸತ್ಯದ ಮಾರ್ಗದಲ್ಲಿಯೇ ಸಂಚರಿಸುವನು. ಅವನು ಎಲ್ಲಾ ಜೀವಾಣುಗಳ ಕಲ್ಯಾಣವನ್ನು ಬಯುಸುವನು ನಿಜವಾದ ಯೋಗಿಯು ಜೀವನದುದ್ದಕ್ಕೂ ಬ್ರಹ್ಮಚರ್ಯಪಾಲನೆ ಮಾಡುವವನು ನಿಜವಾದ ಗುರುವು ನಮ್ಮನ್ನು ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯುವನು.

ಲೇಖಕನು ಮುಂದುವರಿಸುತ್ತ ನಿಜವಾದ ಧಾರ್ಮಿಕ ಸಾಮರ್ಥ್ಯದ ಬಗ್ಗೆ ವಿವರಿಸುತ್ತಾ ಅದು ಕರುಣೆ, ಸ್ನೇಹ, ವಿಶಾಲಮನೋಭಾವನೆ, ಸತ್ಯವಂತಿಕೆ, ಬ್ರಹ್ಮಚರ್ಯ ಪರಿಪಾಲನೆ ಹಾಗೂ ಪರರ ಸಂಪತ್ತಿಗೆ ಆಶಿಸುವುದನ್ನು ತಡೆಹಿಡಿಯುವುದನ್ನು ಕಲಿಸಿಕೊಡುತ್ತದೆ ಎಂದು ಹೇಳುತ್ತಾರೆ.

ಇನ್ನೂ ಭಿನ್ನವಾಗಿ ಲೇಖಕರು ಉಲ್ಲೇಖಿಸುವುದೆಂದರೆ ಕ್ರೋಧ, ಅಹಂಭಾವ, ವಂಚನೆ ಹಾಗೂ ಧನಲೋಭ ಯಾವಾಗಲೂ ಕೇವಲ ಪರರ ಆತ್ಮವಲ್ಲ ಸ್ವತಃ ತಮ್ಮ ಆತ್ಮವನ್ನು ಉಲ್ಲಂಘಿಸುವುದು, ನಿರ್ಮೋಹವೇ ಅತ್ಯುನ್ನತವಾದ ಧರ್ಮವು.

ಜೈನ ಧರ್ಮದ ಇನ್ನೊಂದು ಪ್ರಮುಖವಾದ ವಿಶೇಷ ಗುಣವೆಂದರೆ "ಸ್ಯಾದ್ವದಾ" ಇದನ್ನು ಲೇಖಕರು ಈ ಪುಸಕದಲ್ಲಿ ತುಂಬಾ ಯೋಗ್ಯ ರೀತಿಯಲ್ಲಿ ವಿವರಿಸಿರುವರು. ಈ "ಸ್ಯಾದ್ವದಾ" ತತ್ವವನ್ನು ಜಗತ್ತೇ ಕೊಂಡಾಡಿದೆ. ಮನುಕುಲಕ್ಕೆ ಇದೊಂದು ಅಪಾರವಾದ ಕೊಡುಗೆಯಾಗಿದೆ ಎಂದು ಹೇಳಲಾಗಿದೆ. ಇದೊಂದು ವೈವಿಧ್ಯಮಯ ಹಂತಗಳ ಪದ್ಧತಿಯಾಗಿದೆ.

ಲೇಖಕರು ಒತ್ತಿ ಒತ್ತಿ ಹೇಳುವುದೇನೆಂದರೆ, ಮೋಹ (ರಾಗಾ) ಹಾಗೂ ದ್ವೇಷದಿಂದ ಮುಕ್ತರಾದರೆ ಮೋಕ್ಷವು ಪ್ರಾಪ್ತಿಯಾಗುವುದು. ಯಾರೇ ಆಗಲೀ, ಯಾವುದೇ ಧರ್ಮದವನಾಗಲಿ ಇದನ್ನು ಸಾಧಿಸಬಹುದಾಗಿದೆ. ಎಂದ ಅದ್ಭುತವಾದ ಕಲ್ಪನೆ! "ಓಂ ನಮೋ ಸಿದ್ಧಮ್" ಇದನ್ನು ಮಹಾರಾಷ್ಟ್ರದ ಶಾಲೆಗಳಲ್ಲಿ ಇಂದಿಗೂ ಪಠಣ ಮಾಡಲಾಗುತ್ತದೆ.

ಈ ಪುಸ್ತಕದ ಲೇಖಕರು ಮನದಟ್ಟ ಆಗುವಂತೆ ವಾದಿಸುವುದೇನೆಂದರೆ ಈ ಜಗತ್ತಿನಷ್ಟೇ ಈ ಜೈನ ಧರ್ಮವು ಪ್ರಾಚೀನವಾಗಿರುವುದು. ಜೈನ ಧರ್ಮದ ಪ್ರಕಾರ ಇದಕ್ಕೆ ಪ್ರಥಮ ಪ್ರಚಾಕರು ಇರಲಿಲ್ಲವಂತೆ, ಎಲ್ಲ ಪ್ರವಾದಿಗಳು–ತೀರ್ಥಂಕರರು ಒಂದೇ ರೀತಿಯ ಧರ್ಮ ಪ್ರಸಾರವನ್ನು ಬೇರೆ ಬೇರೆ ಕಾಲಕ್ಕೆ ಮಾಡಿರುವರು. ಅದರ ಪರಿಣಾಮವಾಗಿ ಇಂದಿಗೂ ಜೈನ ಧರ್ಮದ ಕುರುಹುಗಳು ಎಲ್ಲೆಲ್ಲೂ ಲಭ್ಯವಿರುವವು. ಭಾರತದ ಎಲ್ಲಾ ಭಾಗಗಳಲ್ಲೂ (ದಕ್ಷಿಣ ಭಾರತವೂ ಸೇರಿ) ಹಾಗೂ ಗ್ರೀಸ್, ಈಜಿಪ್ಟ್ ಹಾಗೂ ರೋಮ್‌ದಂತಹ ವಿದೇಶಗಳಲ್ಲೂ ಕೂಡ.

ಉದಾಹರಣೆಗಾಗಿ ಜೈನಾಚಾರ್ಯರು ಬರೆದಿರುವಂತಹ "ಭುವಲೇ" ಎಂಬ ಪುಸ್ತಕದಲ್ಲಿ ಜೈನ್‌ಧರ್ಮವು ಅನ್ಯಧರ್ಮಗಳ ಮೇಲೆ ಪರಿಣಾಮ ಬೀರಿದುದನ್ನು ವಿವರಿಸಲಾಗಿದೆ. ಜೈನ ಸಂಸ್ಕೃತಿಯು ಅಹಿಂಸೆ, ಸ್ಯಾದ್ವದಾ ಹಾಗೂ ಅಪಾರಿಗ್ರಹ (ಅನ್ಯ ಆಸೆ ಮೋಹಗಳಿಂದ ಮುಕ್ತವಾಗಿರುವುದು, ಜಗತ್ತಿನಲ್ಲಿ ಪರಿಣಾಮ ಉಂಟು ಮಾಡಿರುವುದು.

ಸತ್ಯಾಸತ್ಯತೆಯನ್ನು ವಿಭಿನ್ನ ಕೋನಗಳಿಂದ ನೋಡಲಾಗಿ, ಉದಾಹರಣೆಗೆ ಸ್ಯಾದ್ವದಾ ವಿಶೇಷವಾಗಿ ಜಾಗತಿಕ ಸಂಸ್ಕೃತಿಗೆ ಜೈನ ಧರ್ಮದ ಮಹಾನ್ ಕೊಡುಗೆಯಾಗಿದೆ ಎಂದು

ಹೇಳಬಹುದು.

ತಮಿಳು ಭಾಷೆ ಹಾಗೂ ಸಾಹಿತ್ಯವು ಜೈನ ಧರ್ಮಕ್ಕೆ ತುಂಬಾ ಒಗ್ಗಿಕೊಂಡಿರುವುದು. ಇದೇ ಅಂಶವು ನಮ್ಮ ಕನ್ನಡ ಭಾಷೆ ಹಾಗೂ ಸಾಹಿತ್ಯಕ್ಕೂ ಅನ್ವಯಿಸುತ್ತದೆ. ಗುಜರಾತಿಯು ಕೂಡ ಜೈನ ಧರ್ಮಕ್ಕೆ ತುಂಬಾ ಒಗ್ಗುತ್ತದೆ.

ಲೇಖಕರು ಸೂಚಿಸಿರುವಂತೆ ಜೈನ ಸಾಹಿತ್ಯವು ವಿವಿಧ ಭಾಷೆಗಳಲ್ಲಿ ಬರೆಯಲ್ಪಟ್ಟಿದೆ; ಹಿಂದಿ, ರಾಜಸ್ತಾನಿ, ಉರ್ದು, ಇಂಗ್ಲೀಷ್, ಲ್ಯಾಟಿನ್, ಜರ್ಮನ್ ಅದರಂತೆ ಸಂಸ್ಕೃತ ಹಾಗೂ ಏಳು ವಿಭಿನ್ನ ಪ್ರಕೃತ ಭಾಷೆಗಳಾದ ಅರ್ಧಮಾಗಧಿ, ಪೈಸಾಚಿ, ಮಹಾರಾಷ್ಟ್ರಿ, ಸೌರ್‌ಸೇನಿ ಮುಂತಾದವು. ಇಷ್ಟೊಂದು ವೈಶಾಲ್ಯತೆಯನ್ನು ಹೊಂದಿದೆಯೆಂದರೆ ಜೈನ ಸಾಹಿತ್ಯವಿಲ್ಲದೆ ಸಂಸ್ಕೃತವೂ ನೀರಸವೆನಿಸುವುದು. "ಸಪ್ತಸಂಧಾನ" ದ ಲೇಖಕರು ಹಾಗೂ ಜೈನ್‌ಮುನಿ ಸಮಯ ಸುಂದರ (ಇವರು ಒಂದೇ ಒಂದು ವಾಕ್ಯಕ್ಕೆ ಎಂಟು ಲಕ್ಷ ಅರ್ಥಗಳನ್ನು ಕಲ್ಪಿಸಿರುವವರು (ಪದಾ)) "ರಾಜಾ ನಾವೊದಡಾತೆ ಸೌಖ್ಯಮ್" ಹಾಗೂ ಮಿಕ್ಕ ಜೈನಾಚಾರ್ಯರು ಸುಸಂಸ್ಕೃತವು ಜಗತ್ತಿಗೆ ಮಹಾನ್ ಭಾಷೆ ಎಂದು ತೋರಿಸಿಕೊಟ್ಟವರು.

ಜೈನ ಶಿಲ್ಪಕಲೆಯು ಕೂಡ ಜಗತ್ತಿಗೆ ದೊಡ್ಡ ಕೊಡುಗೆಯನ್ನು ಕೊಟ್ಟಿರುವುದು ಎಂಬುದನ್ನು ಹೇಳಲು ಮರೆಯಲಾದೀತೇ? ಅಬು, ದೇಲ್‌ವಾಡಾ ಹಾಗೂ ರಣಕ್‌ಪುರ್ ಇವುಗಳು ಜೈನ ಶಿಲ್ಪಕಲೆಯ ಶ್ರೇಷ್ಠ ಉದಾಹರಣೆಗಳು.

ಮುನುಕಲದ ಕಲ್ಯಾಣಕ್ಕೆ ಉತ್ತಮ ಚರಿತ್ರೆಯು ಮೂಲಭೂತವಾಗಿ ಅವಶ್ಯಕವು. ಸನ್ಯಾಸಿಗೆ ಒಬ್ಬ ನಿಜವಾದ ಭಕ್ತನಿಗೆ ಹಾಗೂ "ಶ್ರಾವಕ" ನಿಗೆ ಅಪ್ಪಟವಾದ ನಿಷ್ಕಳಂಕ ನಡತೆ ಅತ್ಯವಶ್ಯಕವಾದುದು.

ಒಬ್ಬ ಅಪ್ಪಟ ಜೈನ ವ್ಯಕ್ತಿಯಾಗು, ಇಡೀ ಪ್ರಪಂಚವೇ ನಿನ್ನ ಪಾದದಡಿಯಲ್ಲಿ ಶರಣಾಗುವುದು ಎಂದು ಲೇಖಕರು ಹೇಳುತ್ತಾರೆ. ಇವರು ನಿಜವಾದ ಧರ್ಮದ ಸಾರವನ್ನು ಒಂದು ಚಿಪ್ಪಿನಲ್ಲಿ (ಪರಟೆ) ಹಾಗೂ ಸಾಗರದಷ್ಟು ಜ್ಞಾನವನ್ನು ಒಂದು ಪುಟ್ಟ ಮಣ್ಣಿನ ಕುಡಿಕೆಯಲ್ಲಿ ಕೊಟ್ಟಿರುವರು. ಆ ಸತ್ಯವಾದ ಜ್ಞಾನವನ್ನು ಅರಗಿಸಿಕೊಳ್ಳಲು ಪ್ರಯತ್ನಿಸೋಣ ಹಾಗೂ ಶಾಶ್ವತವಾದ ಪರಮಸುಖ, ಮೋಕ್ಷ ಹಾಗೂ ವಿಮೋಚನೆಯನ್ನು ಪಡೆಯೋಣ.

ಖಂಡಿತವಾಗಿಯೂ ನಮ್ಮನ್ನು ನಮ್ಮ ಅಂತಿಮ ಗುರಿಯಾದ ಮೋಕ್ಷದವರೆಗೆ ಕೊಂಡೊಯ್ಯಬಲ್ಲ ಈ ಅಮೂಲ್ಯವಾದ ಕೃತಿಯನ್ನು ನಮ್ಮೆಲ್ಲರಿಗೂ ನೀಡಿದ ಲೇಖಕರಿಗೆ ನಾವೆಲ್ಲಾ ಸದಾ ಕೃಜ್ಞರಾಗಿರೋಣ.

ಡಾ॥ ವಿ.ಜೆ.ಚೋಕ್ಷಿ ಎಂ.ಎ. ಪಿ.ಹೆಚ್.ಡಿ. ಅಹಮ್ಮದಾಬಾದ್

INDEX

1.	Introduction	13
2.	Basic Principles	14
3.	ಜೈನ ಧರ್ಮದ ರೂಪುರೇಷೆಗಳು ದೇವ (ಪ್ರಮುಖ ದೇವರು)	15-22
4.	The Navakar maha mantra	23-24
5.	ಗುರು – ಉಪದೇಶಕ	25-30
6.	Metaphysics of Jainism	31
7.	ಧರ್ಮ – ಅಹಿಂಸೆ	32-35
8.	Teachings of Lord Mahaveer and principles of Jainism	36
9.	ಸ್ಯಾದ್ವದಾ ಅಥವಾ ಅನೇಕಂಟವಾದಾ	37-45
10.	Philosophy of Karma	46-47
11.	Study of Jainism	48-49
12.	ಜೈನ ಧರ್ಮದ ಪ್ರಾಚೀನತೆ	50-53
13.	Developement of Architecture and the cult of Bhakti	54
14.	Image Worship	55-57
15.	ಪ್ರಚಾರ	58-60
16.	ಪ್ರಭಾವ	61-63
17.	ಜೈನ ಕಲೆ ಹಾಗೂ ಸೌಂದರ್ಯ ಶಾಸ್ತ್ರ	64-65
18.	ನಮ್ಮ ಒಂದೇ ಕರ್ತವ್ಯ	66-67
19.	ವಿವಿಧ ಗಣ್ಯವ್ಯಕ್ತಿಗಳ ಉಲ್ಲೇಖನೆಗಳು	68-76
20.	Contribution of Jainism to Indian culture	77-78
21.	Important Jain Websites.	79

Introduction:

Jainism is one of the most ancient and probably the only non-absolutist religion of the world. Its antiquity goes back to the beginningless world, if at all the world had a beginning then why not now ? According to Jain traditions,the Human Soul & the universe are anaadi (beginning-less) and (endiless), Jainism literally means the noble path and the faith propounded and preached by the 'Jins', the perfect omniscient being. The followers of this path are known as Jains,Earlier,it was known as the Sramana Sanskriti. The Sramanas worshipped "Deva"(The Jina). Through Sastra (accumulated & recorded knowledge given out by the JIna) and 'Guru' (the saints)who tread the path shown by the Jina, disseminating and propagating the three-fold perfect path of 'samyak darshan' (right faith)'samyak jnana (right knowledge) & 'samyak caritra' (right conduct), to attain 'Moksa' (liberation from the cycle of birth and deaths) is the ultimate aim of human soul.'Samyak Darsana, Jnana, Caritrani Moksha Margah"-Tatvarshsootra ch1 sootra 1.

-Dr.M.M. Begani,Bombay Hospital
email-abhishekdaycare9@hotmail.com mob: 9930765533

Basic Principles

'Jainism is the universal and propounds a philosophy for total emancipation of all mankind-nay of all living beings (Jiva) from their never-ending miseries, fears and ills of life. It propagates universal brotherhood of man, irrespective of any distinction of birth,cast,creed, colour or race, as also compassion towards animals and all lower froms of living creatures from the tiniest bodled amoeba to the giantly pre-histotic dinosaur. Its lofty principles of Ahimsa (Non-violence) and-absolutism) root out all causes between nations and religions of the world and aim at everlasting peace on this planet based on the dignity of the individul and respect for all forms of the life and views. Conflicts and wars arise in the minds of men driven by a mistaken notion of superiority of one race over the other and zealousness to sprade their own religion to the elimination of all other un-mindful of the untold miseries and bloodshed it might inflict on their fellow human beings and mute animals.

ಜೈನ ಧರ್ಮದ ರೂಪರೇಷೆಗಳು
ದೇವಾ (ಪ್ರಮುಖ ದೇವರು)

ಪ್ರಪಂಚದಲ್ಲಿ ಬೆಳ್ಳಗಿರುವುದೆಲ್ಲ ಹಾಲು ಹಾಗೂ ಹಳದೆ ಬಣ್ಣದ ವಸ್ತುಗಳೆಲ್ಲ ಚಿನ್ನವಾಗಿದ್ದರೆ ಯಾವ ವಿವಾದವೂ ಇರುತ್ತಿರಲಿಲ್ಲ. ಆದರೆ ಜಗತ್ತಿನಲ್ಲಿ ಅಸಲಿಗಿಂತ ನಕಲಿಯೇ ಅಧಿಕವಾಗಿರುವುದರಿಂದ ದೈನಂದಿನ ವ್ಯವಹಾರಗಳಲ್ಲಿ ಅತ್ಯಂತ ಜಾಗರೂಕವಾಗಿರಬೇಕಾಗಿದೆ. ಯಾವುದೇ ವಸ್ತುವಿಗೆ "ಮೇಡ್ ಇನ್ ಯು.ಎಸ್.ಎ." ಎಂದು ಲೇಬಲ್ ಅಂಟಿಸಲಾಗಿದ್ದರೆ ವಾಸ್ತವವಾಗಿ ಅದು ಯಾವುದೋ ಗಲ್ಲಿಯ ಫ್ಯಾಕ್ಟರಿ "ಉಲ್ಲಾಸನಗರ ಸಿಂಧಿ ಅಸೋಷಿಯೇಶನ್" ನಲ್ಲಿ ತಯಾರಿಸಲ್ಪಟ್ಟಿರುತ್ತದೆ.

ಇಂಥ ಉದಾಹರಣೆಗಳು ವ್ಯಕ್ತಿಗಳಲ್ಲಿ ಇಲ್ಲವೇನು? ಒಂದು ಮಗು ಮುದ್ದು ಮುದ್ದಾಗಿ ತೊದಲುತ್ತಾ ಮಾತನಾಡಿದರೆ ಅದು ಅವರ ಪಾಲಕರಿಗೆ ಅಂದವಾಗಿ ಕಾಣುತ್ತದೆ. ಆದರೆ ಅದೇ ಮಗುವು ಬೆಳೆದು ದೊಡ್ಡವನಾಗಿ ಮದುವೆಯ ನಂತರ ಪಾಲಕರಿಂದ ಪ್ರತ್ಯೇಕನಾದಾಗ, ತನ್ನ ತಂದೆ–ತಾಯಿಯನ್ನು ಅಷ್ಟೊಂದು ಇಷ್ಟ ಪಡಲಿಕ್ಕಿಲ್ಲ. ಆಗ ಆತನ ತಂದೆ–ತಾಯಿಗಳಿಗೆ ತಮ್ಮ ಹಾಗೂ ತಮ್ಮ ಮಗನ ಸಂಬಂಧ ನಕಲಿ ಎಂಬ ಭಾವನೆಯು ಬರುವುದು ಸಹಜ.

ಕೆಲವು ಉದಾಹರಣೆಗಳಿವೆ: ಮದುಮಗನು ಮೆರವಣಿಗೆಯಲ್ಲಿ ಅಲಂಕೃತ ಕುದುರೆಯ ಮೇಲೆ ಕುಳಿತು ಸಂಭ್ರಮದಿಂದ ಹೊರಡುವನು. ಆದರೆ ಕೆಲವೇ ದಿನಗಳಲ್ಲಿ ಆತನು ತನ್ನ ಪತ್ನಿಯಿಂದ ವಿಚ್ಛೇದನೆಯನ್ನು ಪಡೆಯಲು ಚಡಪಡಿಸಲು ತೊಡಗುವನು. ಹೀಗೆ ಏಕೆ ಆಗುತ್ತದೆ? ಹಾಗಾದರೆ ಪತಿ–ಪತ್ನಿಯರಾಗಿರುವ ಇವರ ಜೊತೆಯು ಅಸಲಿ ಅಲ್ಲವೇನು?

ಹೌದು, ಈ ಪ್ರಪಂಚದಲ್ಲಿ ಅಸಲಿ ವಸ್ತುಗಳೊಂದಿಗೆ ನಕಲಿ ವಸ್ತುಗಳೂ ಇರುವವು. ಆದ್ದರಿಂದ ಪ್ರತಿಯೊಬ್ಬರೂ ಅಸಲಿ ಯಾವುದು ನಕಲಿ ಯಾವುದು

ಎಂದು ವಿವೇಚಿಸಬೇಕು. ಧಾರ್ಮಿಕ ಕ್ಷೇತ್ರದಲ್ಲಿಯೂ ಇಂತಹುದೇ ಸ್ಥಿತಿ ಇದೆ. ಇಲ್ಲಿ ಅಸಲಿಗಿಂತ ನಕಲಿಯದೇ ಹೆಚ್ಚೆಚ್ಚು ಆಕರ್ಷಕವಾಗಿರುತ್ತದೆ. ಆದ್ದರಿಂದ ಪ್ರತಿಯೊಬ್ಬರು ಈ ಧಾರ್ಮಿಕ ವಲಯದಿಂದ ಸುರಕ್ಷಿತರಾಗಿರಲು ಪ್ರಯತ್ನಿಸಬೇಕು.

ಧರ್ಮದ ಪ್ರಮುಖ ವಿಶೇಷತೆಯೇ ಭಗವಂತ, ಆದ್ದರಿಂದ ಭಗವಂತ ಅಂದರೆ ಏನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಕೆಲವೊಮ್ಮೆ ಭಗವಂತ ತಮ್ಮ ಮುಂದೆ ಪ್ರಸನ್ನವಾಗಲಿ, ಕಾಣಿಸಿಕೊಳ್ಳಲಿ ಎಂದು ಮೊರೆಯುಟ್ಟು ಪ್ರಾರ್ಥಿಸುವರು. ಆದರೆ ವಾಸ್ತವಿಕವಾಗಿ ದೇವರು ಎಂದಾದರೂ ಕಾಣಿಸಿಕೊಂಡಿದ್ದೀರಾ? ಪ್ರಸ್ತುತ ನಮ್ಮ ಮಧ್ಯೆ ಯಾರಾದರೂ ಪ್ರವಾದಿ ಅಥವಾ ಭಗವಂತನ ಅವತಾರ ಯಾವುದೇ ಧರ್ಮದವರಾಗಿರಲಿ ಇಲ್ಲವೇ ಇಲ್ಲ. ಆದ್ದರಿಂದ ಭಗವಂತ ಅಂದರೆ ಏನು ಅಂತಾ ತಿಳಿದುಕೊಳ್ಳಲು ಪ್ರಾಚೀನ ಪವಿತ್ರ ಧರ್ಮಗ್ರಂಥಗಳ ಅವಲೋಕನೆ ಮಾಡಿ ಪ್ರಯತ್ನಿಸಬೇಕು.

ಸಾಹಿತ್ಯವು ಒಂದು ಕನ್ನಡಿಯಿದ್ದಂತೆ, ಅದರ ಮುಂದೆ ಯಾವ ವಸ್ತುವನ್ನು ಹಿಡಿಯುವವೋ ಕನ್ನಡಿಯಲ್ಲಿ ಅದೇ ಕಾಣಿಸಿಕೊಳ್ಳುವುದು. ಕನ್ನಡಿಯು ಪ್ರಾಮಾಣಿಕತೆಯನ್ನು ಸೂಚಿಸುತ್ತದೆ. ಒಬ್ಬ ಕಪ್ಪು ನಿಗ್ರೊ ಕನ್ನಡಿಯಲ್ಲಿ ಬೆಳ್ಳಗೆ ಕಾಣುವುದಿಲ್ಲ ಅದರಂತೆ ಒಬ್ಬ ಬೆಳ್ಳಗಿರುವ ವ್ಯಕ್ತಿಯು ಕಪ್ಪಾಗಿ ಕಾಣುವುದಿಲ್ಲ.

ಸಂಕ್ಷಿಪ್ತವಾಗಿ ಹೇಳಬೇಕೆಂದರೆ ನಿಜವಾದ ದೇವರು ವ್ಯಾಮೋಹ, ಅಹಂಕಾರ ಹಾಗೂ ಸ್ವಾರ್ಥತೆಯಿಂದ ಮುಕ್ತನಾಗಿರುವವನು ಎಂದು ಪ್ರತಿಪಾದಿಸಬಹುದು. ಜಗತ್ತಿನಲ್ಲಿರುವ ಒಳ್ಳೆಯ ಹಾಗೂ ಕೆಟ್ಟವುಗಳನ್ನು ಮೀರಿ ನಿಂತವರೇ ದೇವರು.

ಏಕೆ ವ್ಯಕ್ತಿಗೆ ಪಾಪಿ, ಕೆಟ್ಟವನು, ಕೆಳಮಟ್ಟದವನು, ಕ್ರೂರ, ಎಂಬ ಲೇಬಲ್‌ಗಳನ್ನು ಅಂಟಿಸುವಿರಿ? ಓ! ಆತನು ಮೋಹ ಹಾಗೂ ದ್ವೇಷವೆಂಬ

ಭಾವೋದ್ವೇಗಗಳಿಂದ ಮುಕ್ತನಾಗಿಲ್ಲ ಎಂಬ ಕಾರಣದಿಂದಲೋ, ಪಾಪಿ ಯಾರು? ಓ! ಆತನು ತನ್ನ ಸ್ವಾರ್ಥವನ್ನು ಸಾಧಿಸಲು ಕ್ರೋಧಿತನಾಗುವನು, ವ್ಯರ್ಥವಾಗಿ ಅನಿಷ್ಠ ಕೃತ್ಯಗಳಿಗೆ ಆಶ್ರಯ ಪಡೆಯಲು ಹಿಂದೇಟು ಹಾಕದವನು ಎಂದೋ, ಹೌದು, ಆತನು ವ್ಯಾಮೋಹಗಳಿಗೆ ಅಂಟಿಕೊಂಡಿರುವುದು ಹಾಗೂ ಆತನಲ್ಲಿ ದ್ವೇಷ ಮತ್ತು ಅವಿವೇಕತನ ಇರುವುದರಿಂದಲೇ ಆತನು ಒಬ್ಬ ಪಾಪಿಯಾಗಿರುವನು.

ವ್ಯಾಮೋಹದ ಅರ್ಥವು "ನಾನು" "ನನ್ನ ಹೆಂಡತಿ" "ನನ್ನ ಸಂಪತ್ತು" "ನನ್ನ ಪರಿವಾರ" "ನನ್ನ ಶರೀರ" "ನನ್ನ ಭಕ್ತಿ" ಅಥವಾ "ನನ್ನ ಹಿಂಬಾಲಕ" ಎಂಬ ಸ್ವಾರ್ಥತೆಗಳಿಗೆ ಗುಲಾಮನಾಗಿರುವುದು. ಈ ಸ್ವಾರ್ಥತೆಯೋ ಆತನನ್ನು ಅನಿಷ್ಠತೆಗಳೆಡೆ ಆತನನ್ನು ಕೊಂಡೊಯ್ಯುವುದು. ಯಾವ ವ್ಯಕ್ತಿಯು ತನ್ನನ್ನು ತಾನು ಅದ್ವಿತೀಯ, ತನಗೆ ಯಾರು ಸರಿಸಾಟಿ ಇಲ್ಲ, ಹಾಗೂ ಎಲ್ಲರೂ ತನ್ನ ಮುಂದೆ ತಲೆ ತಗ್ಗಿಸಬೇಕು, ತನ್ನನ್ನು ಆರಾಧಿಸಬೇಕು ಎಂದು ಇಚ್ಛಿಸುವನೋ, ಆತ ವಿರೋಧಿಗಳನ್ನು ನಾಶಪಡಿಸುವ ಅಥವಾ ಸಾಯಿಸುವ ಹಂತಕ್ಕೂ ಹೋಗಬಹುದು.

ನಮಗೆ "ಸತ್ಯ" ಏನೆಂಬುದು ಅರಿಯದೇ ಹೋಗುವುದು. ಏಕೆಂದರೆ ನಾವು ಕೂಡ ಮೋಹ ಹಾಗೂ ದ್ವೇಷವೆಂಬ ಅಲೆಗಳಲ್ಲಿ ಸಿಲುಕಿಕೊಂಡಿರುವೆವು. ಅಂದ ಮೇಲೆ ಇಡೀ ಪ್ರಪಂಚ ಹಾಗೂ ಅವರ ಮೂಲ ವಸ್ತುಗಳ ಬಗ್ಗೆ ನಮಗೆ ಹೇಗೆ ಗೊತ್ತಾಗಬಲ್ಲದು? "ಸತ್ಯತೆ" ಯ ಬಗ್ಗೆ ಅವಿವೇಕತೆಯ ಬೀಜಗಳು ನಮ್ಮಲ್ಲಿ ಬಿತ್ತಲ್ಪಟ್ಟಿರುವುದರಿಂದ ಸ್ವಾರ್ಥಕತೆ ಹಾಗೂ ಅಹಂಕಾರಗಳು ನಮ್ಮಲ್ಲಿ ಬೀಡುಬಿಟ್ಟಿವೆ. ಅದುವೇ ದುಃಖಕ್ಕೆ ಕಾರಣ.

ನಾವು ಪ್ರಯಾಣ ಮಾಡುವ ಕಾರು ಅಪಘಾತದಿಂದಾಗಿ ನಮಗೆ ಸಾವು ಬರುವ ಸಾಧ್ಯತೆ ಇರುತ್ತದೆ. ನಮ್ಮ ಸ್ವಂತ ಹೆಂಡತಿಯೇ ನಮಗೆ ವಿಶ್ವಾಸಘಾತ ಮಾಡಬಹುದು. ನಾವು ಮನಗಾಣಲು ಸಿದ್ಧರಿಲ್ಲದಿದರೂ ಈ ನಮ್ಮ ಶರೀರವು

ವಯಸ್ಸಾದಂತೆ ಸವಕಲುಗೊಂಡು ರೋಗಗ್ರಸ್ತವಾಗಿ ಒಂದಿಲ್ಲೊಂದು ದಿನ ಶವವಾಗುವುದು.

ಪರಮಾತ್ಮನು ನಮ್ಮಂತೆ ಅಲ್ಲ. ಸಾಮನ್ಯ ಆತ್ಮಗಳಿಗಿಂತ ಉನ್ನತವಾಗಿರುವನು ಹಾಗೂ ಭಿನ್ನವೂ ಆಗಿರುವನು. ಪರಮಾತ್ಮನು ನಮ್ಮಂತೆ ವ್ಯಾಮೋಹ, ದ್ವೇಷ ಹಾಗೂ ಅವಿವೇಕತನವನ್ನು ಹೊಂದಿರುವುದಿಲ್ಲ. ಅಂಥ ಪರಮವಾದ ಆತ್ಮನೇ ಭಗವಂತ. ಇಂಥ ಪರಮಾತ್ಮನ ಆತ್ಮಕತೆಯನ್ನು ಓದಿದಾಗ ಉಚ್ಛ್ರಾಯ ಹಂತಕ್ಕೆ ತಲುಪಿದಂತಾಗಿ ಸತ್ಯತೆಯ ಅನುಭವವಾಗುವುದು. ನಂತರ ಆ ಭಗವಂತನು ಎಲ್ಲರನ್ನೂ ಮಿತ್ರನಂತೆ ನಡೆದುಕೊಳ್ಳುತ್ತಾನೆ. ಇಂತಹ ಮಹಾ ಆತ್ಮವು ತಪಸ್ಸು ಹಾಗೂ ಆತ್ಮಸಂಯಮತೆ, ಕರುಣೆ ಹಾಗೂ ವಿಸ್ತಾರೆಯಿಂದ ಒಳಗೊಂಡಿದೆ. ಇವರು ತಮ್ಮ ಅನುಯಾಯಿಗಳಿಂದ ಹರ್ಷ ಭಾವೋದ್ವೇಗಗೊಳ್ಳುವುದಿಲ್ಲ. ಅದರಂತೆ ನಿಂದಕರಿಂದ ಅಸಮಾಧಾನಗೊಂಡು ಕುಗ್ಗುವುದೂ ಇಲ್ಲ. ಭಗವಂತ ಆರಾಧಿಸುವವರ ಅಥವಾ ನಿಂದಕರ ಗಣನೆಗಿಂತ ಉನ್ನತವಾದ ಸ್ಥಾನದಲ್ಲಿರುವವರು. ಅವನು ಯಾರನ್ನೂ ಶಪಿಸುವುದೂ ಇಲ್ಲ, ನಾಶವನ್ನು ಮಾಡುವುದಿಲ್ಲ. ಅವನು ಪರಮಾತ್ಮ ಅಥವಾ "ಅರಿಹಂತ". ಅರಿಹಂತ ಎಂದರೆ ವ್ಯಾಮೋಹ, ದ್ವೇಷ ಹಾಗೂ ಅವಿವೇಕತನ ಎಂಬ "ಅರಿ" ಯನ್ನು (ಶತ್ರುವನ್ನು) ನಾಶ ಪಡಿಸುವವನು. ಈ ಶತ್ರುಗಳನ್ನು ಜಯಿಸಿದ್ದರಿಂಲೇ ಈತನನ್ನು "ಜಿನೇಶ್ವರ" ಎಂದೂ ಕರೆಯಲ್ಪಡುತ್ತದೆ. ಯಾವ ಸ್ಥಳದಲ್ಲಿಯೇ ಜನಿಸಿರಲಿ ಇಲ್ಲವೇ ಏನೇ ಚಟುವಟಿಕೆಗಳನ್ನು ಮಾಡಿರಲಿ, ಅಂಥ ತೀರ್ಥಂಕರರು ಅಥವಾ ಜಿನೇಶ್ವರರು ವ್ಯಾಮೋಹ, ದ್ವೇಷ ಹಾಗೂ ಅವಿವೇಕತನವನ್ನು ಮೆಟ್ಟಿ ನಿಂತವರು ಆಗಿರುತ್ತಾರೆ. ಇಂಥ ಮಹಾಪುರುಷರು ಸಜ್ಜನರಿಂದ ಸಂತುಷ್ಟವೊಳ್ಳುವುದಿಲ್ಲ. ದುರ್ಜನರೊಂದಿಗೆ ಕುಪಿತರಾಗುವುದಿಲ್ಲ. ಇಂಥ ಉದಾತ್ತ ಮಹಾಪುರುಷರು ಸಾಧಾರಣ ಆತ್ಮದಿಂದ ಪರಮ ಆತ್ಮವನ್ನು ಹೊಂದುವ ದಾರಿಯನ್ನು ತೋರುವರು.

ಇಂಥಹ ಉನ್ನತವಾದ ಆತ್ಮಗಳು ತೋರುವ ಸ್ಥಳಗಳಲ್ಲಿ ಶಾಂತಿ ಹಾಗೂ ನೆಮ್ಮದಿಯು ಪ್ರಾಪ್ತವಾಗುವುದು. ಸಿಂಹವು ತನ್ನ ಕ್ರೂರತೆಯನ್ನು ತೊರೆಯುವುದು ಹಾಗೂ ಅಂಜುಬುರುಕ ಹಸುವು ಧೈರ್ಯವಂತನಾಗುವುದು.

ಇಂಥಹ ಮಹಾನ್ ವ್ಯಕ್ತಿಗಳ ಪ್ರತಿಮೆ ಅಥವಾ ಚಿತ್ರವನ್ನು ನೋಡಿದರೆ ಸಾಕು ಅವರುಗಳ ಉದಾತ್ತ ಜೀವನದ ಪ್ರತಿಬಿಂಬವು ನಮ್ಮ ಮೇಲೆ ಮೂಡುವುದು. ಇಂತಹ ಪ್ರತಿಮೆಗಳನ್ನು ಪೂಜ್ಯ ಭಾವನೆಯಿಂದ ನೋಡಿ ಗೌರವ ಸೂಚಿಸಿರಿ. ಇಂತಹ ಪ್ರತಿಮೆಗಳು ನಿಜವಾದ ಪರಮಾತ್ಮನ ಕಲ್ಪನೆಯನ್ನು ಜ್ಞಾಪಿಸಿಕೊಡುತ್ತದೆ.

ಇವರುಗಳ ಕೈಯಲ್ಲಿ ಯಾವುದೇ ಶಸ್ತ್ರಾಸ್ತ್ರಗಳು, ಆಯುಧಗಳು ಇಲ್ಲದಿರುವುದನ್ನು ಗಮನಿಸಬಹುದು. ಭಯ, ಭೀತಿ ಇರುವವರು ಶಸ್ತ್ರಾಸ್ತ್ರ ಹಾಗೂ ಮದ್ದುಗುಂಡುಗಳನ್ನು ತಮ್ಮೊಂದಿಗೆ ಇರಿಸಿಕೊಂಡಿರುತ್ತಾರೆ. ನಿಜವಾದ ದೇವರ ಕೈಯಲ್ಲಿ ಯಾವ ಆಯುಧವೂ ಇರುವುದಿಲ್ಲ. ಯಾವುದೇ ಅರಿಹಂತನ ವಿಗ್ರಹವು ಪದ್ಮಾಸನ ಮುದ್ರೆಯಲ್ಲಿ ಕುಳಿತಿರುವುದೇ ಆಗಿರುವುದು. ಅವನು ಯಾವುದೇ ಆನೆಯ ಅಂಬಾರಿಯಲ್ಲಿ ಹೊರಟಿರುವುದು. ಎತ್ತಿನ ಮೇಲೆ ಇಲ್ಲವೇ ಇಲ್ಲಿಯ ಮೇಲೆ ಕುಳಿತು ಹೋಗುತ್ತಿರುವುದನ್ನು ಕಾಣಲಾರಿರಿ. ವಾಹನಗಳು ಪ್ರವಾಸಿಗರಿಗೆ ಅವಶ್ಯಕವೇ ಹೊರತು ವಿಮೋಚನೆಗೊಂಡ ಆತ್ಮಗಳಿಗೆ ಅಲ್ಲ. ಅವನು ಮೋಕ್ಷಗೊಂಡ ಅವಸ್ಥೆಯಲ್ಲಿ ಇರುವನು, ಆತನಿಗೇಕೆ ಬೇಕು ವಾಹನಗಳು? ನಾವು ಕೂಡ ಮೋಕ್ಷವನ್ನು ಪಡೆಯಬೇಕಾದ ಜಿನೇಶ್ವರರ ಧರ್ಮಬೋಧನೆಯನ್ನು ಕಟ್ಟು-ನಿಟ್ಟಾಗಿ ಪಾಲಿಸಬೇಕು. ಮೇಲಾಗಿ ಈ ಮಹಾನ್ ಆತ್ಮರ ವಿಗ್ರಹಗಳ ಕೈಯಲ್ಲಿ ಜಪಮಣಿಯು ಇಲ್ಲ.

ಇಷ್ಟೇ ಅಲ್ಲ, ತೀರ್ಥಂಕರರ ವಿಗ್ರಹಗಳ ಪಕ್ಕದಲ್ಲಿ ಅವರ ಪತ್ನಿಯ ಅಥವಾ ಪತಿಯ ವಿಗ್ರಹ ಇರುವುದಿಲ್ಲ. ವಿಗ್ರಹದ ಪಕ್ಕದಲ್ಲಿ ಸ್ತ್ರೀಯ ವಿಗ್ರಹ ಇದ್ದರೆ ದೇವರಿಗೆ ಪತ್ನಿ ಇರುವರು ಎಂಬ ಅರ್ಥ ಬರುವುದು. ದೇವರಿಗೆ

ಎಂದಾದರೂ ಪತ್ನಿ ಇದ್ದರೋ? ಇಲ್ಲ, ಸಾಧ್ಯವಿಲ್ಲ. ಅವರಿಗೆ ಪ್ರಾಪಂಚಿಕ ಸಂಬಂಧಗಳು ಇರುವುದಿಲ್ಲ.

ಮತ್ತೊಮ್ಮೆ ಅವರ ಕಣ್ಣುಗಳು, ಮೂಗು, ಕಿವಿಗಳು ಹಾಗೂ ಬಾಯಿಯತ್ತ ಗಮನವಿಟ್ಟು ನೋಡಿ, ಅವರ ಕಣ್ಣುಗಳಲ್ಲಿ ದ್ವೇಷ ಎಂಬುದು ಗೋಚರಿಸುವುದಿಲ್ಲ. ವ್ಯಾಮೋಹಗಳ ಅಂಶ ಅಥವಾ ಕ್ರೋಧ ಎನ್ನುವುದು ಅವರ ನೋಟದಲ್ಲಿ ಕಂಡು ಬರುವುದಿಲ್ಲ. ಪ್ರತಿಮೆಯನ್ನು ಗಮನವಿಟ್ಟು ನೋಡಿದಾಗ ಇದು ಸಾಮಾನ್ಯ ಆತ್ಮವಲ್ಲ, ಆದರೆ ಖಂಡಿತವಾಗಿಯೂ ದೇವರು ಎಂಬ ಭಾವನೆ ಬರುವುದು.

ಈ ಅರಿಹಂತನು ಕೇವಲ ಜೈನ ಧರ್ಮಸ್ಥರಿಗಷ್ಟೇ ಸೀಮಿತವಾದ ದೇವರಲ್ಲ, ಆದರೆ ದೇವರನ್ನು ನಂಬುವಂಥ ಪ್ರತಿಯೊಬ್ಬರಿಗೂ ಇವರು ದೇವರೇ. ವಾಸ್ತವದಲ್ಲಿ ವ್ಯಾಮೋಹ ಹಾಗೂ ದ್ವೇಷ (ವಿತರಣಾ) ಗಳನ್ನು ಜಯಸಿದ "ಜಿನ" ನ ಆರಾಧಕರೇ ಜೈನರು. ಈ ಅಂಶವೇ ಇವರನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದುದು. ಆದ್ದರಿಂದ ಎಷ್ಟೇ ಜನ ಜೈನ ಪರಿವಾರದಲ್ಲಿ ಜನಿಸದಿದ್ದರೂ ಜೈನ ಧರ್ಮವನ್ನು ಸ್ವೀಕರಿಸಿರುವರು. ಎಷ್ಟೋ ಜೈನ ಮತಸ್ಥರಲ್ಲದವರೂ ಕೂಡ "ಜಿನೇಶ್ವರ" ನಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾರೆ. ಹಿಂದೂ ಶಾಲೆಗಳಲ್ಲಿ ಕೂಡ "ಯೋಗ ವಶಿಷ್ಠ" ವನ್ನು ಸ್ವೀಕರಿಸಿದ್ದಾರೆ. ಈ ಪುಸ್ತಕದ ಲೇಖಕರು ಈ ಮಾತನ್ನು ನಿಖರಪಡಿಸಲು ಈ ಕೆಳಗಿನ ಶ್ಲೋಕವನ್ನು ಅನುಮೋದಿಸಿದ್ದಾರೆ.

"ನಾಹಮ್ ರಾಮೊ ನ ಮೆ ವಾಚ್ಛಾ ವಿಯೇಷು ನ ಚ ಮೆ ಪುನಃ॥

ಶಾಂತಿಮಾಥಾತುಮಿಚ್ಛಾಮಿ ಆತ್ಮನ್ಯೇವ ಜಿನೊ ಯಥಾ॥"

-ಯೋಗ ವಶಿಷ್ಠ

"ನಾನು ರಾಮನಲ್ಲ, ನನಗೆ ಬೇರೆ ಆಸೆಗಳಿಲ್ಲ. ನನಗೆ ಯಾವುದೇ ಆಮಿಷಗಳು

ಇಲ್ಲದಿರುವುದೇ ನನ್ನ ಸಹಜ ಪ್ರವೃತ್ತಿಯು. ಆದರೆ ಜಿನೇಶ್ವರನಂಥವರಿಂದ ನಿರಂತರ ಪರಮಸುಖವನ್ನು ಪಡೆಯುವ ಉತ್ಕಟೇಚ್ಛೆ ಮಾತ್ರ ಇದ್ದೇ ಇದೆ".

ಜಿನೇಶ್ವರನೇ ಪರಿಪೂರ್ಣವಾದ ಪರಮಸುಖವನ್ನು ಕೊಡುವಂತಹ ಆತ್ಮವು ಹಾಗೂ ಇಂಥ ಒಂದು ದೈವಿಕ ಅನುಭವವನ್ನು ಜಗದಲ್ಲಿ ಪಡೆಯುವುದೇ ನಮ್ಮ ಗುರಿ. ಪುರಾಣ ಹಾಗೂ ವೇದಗಳಲ್ಲಿ ಕೂಡ ಜೈನ ತೀರ್ಥಂಕರರ ಬಗ್ಗೆ ಮಂತ್ರಗಳು ಇವೆ. ರಿಶಬ್ದದೇವ ಎಂಬ ಪ್ರಥಮ ತೀರ್ಥಂಕರರೇ ಈ ಮುಕ್ತಿ ಮಾರ್ಗದ ಸ್ಥಾಪಕರು. ಇವರು ವಿಷ್ಣುವಿನ ಪುನರಾವತಾರ. (ಶ್ರೀಮದ್ ಭಗವಂತ್‌ನ 18ನೇ ಅಧ್ಯಾಯದ 9ನೇ ಚರಣದಲ್ಲಿ ಇದೆ). ಇವರು ಎಲ್ಲ ಆತ್ಮಗಳಿಗಾಗಿ ಮೋಕ್ಷದ ಮಾರ್ಗವನ್ನು ತೋರುವಂತಹ ಬೋಧನೆಯನ್ನು ಮಾಡಿರುವರು. ಇಂದ್ರಿಯ ಸುಖದಿಂದ ತೃಪ್ತಿಪಡೆಯುವ ಆಸೆಯಲ್ಲಿ ನಿಜವಾದ ಪರಮಸುಖವನ್ನು ತಪ್ಪಿಸಿಕೊಂಡವರ ಹಿತಕ್ಕಾಗಿ ಇದನ್ನು ಮಾಡಿದರು. ಸ್ವತಃ ಈ ಬೋಧಕರು ಎಲ್ಲ ಆಮಿಷಗಳಿಂದ ಮುಕ್ತರಾಗಿದ್ದರು. ಪ್ರಖ್ಯಾತ ವಿರಕ್ತ ಅರಸ ಭಾತೃಹರಿಯ ಬಗ್ಗೆ ಗೊತ್ತಿಲ್ಲದ ಭಾರತೀಯ ಯಾರೂ ಇಲ್ಲ. ಅವರು ಕೂಡ ಮುಕ್ತಿಯ ಮಾರ್ಗವನ್ನು ತೋರಿಸುವ ನಿಜವಾದ ಮಾರ್ಗದರ್ಶಕ ಜಿನೇಶ್ವರರನ್ನು ಮುಕ್ತ ಕಂಠದಿಂದ ಹೊಗಳಿ ಆರಾಧಿಸುತ್ತಿದ್ದರು.

"ಏಕೊ ರಾಗೀಷು ರಾಜತೆ ಪ್ರಿಯತಮಾದೇಹಾರ್ಧ್ ಧಾರೀ ಹರೊ

ನೀರಾಗೇಷು ಜಿನೊ ವಿಮುಕ್ತ ಲಲನಾ ಸಡ್ಗೋ ನ ಯಸ್ಮಾತ್ ಪರಃ।

ದುರ್ವಾರಸ್ಮರಬಾಣಪನ್ನಗವಿಷ ವ್ಯಾಸಕ್ತ ಮುಗದೋ ಜನಃ

ಶೇಷಃಕಾಯವಿಡಂಬಿತೊ ಹಿ ವಿಷಯಾನ್ ಬೋಕ್ತುಮ್‌ನ ಮೋಕ್ತುಮ್ ಕ್ಷಮಃ॥

ಮಹಾದೇವನ ವಿಗ್ರಹದೊಂದಿಗೆ ಆತನ ಪತ್ನಿ ಪಾರ್ವತಿಯ ವಿಗ್ರಹವನ್ನೂ ಜತೆಗೇ ಇರಿಸಿರುತ್ತಾರೆ. ಆದರೆ "ಜಿನದೇವ" (ತೀರ್ಥಂಕರ) ರ

ವಿಗ್ರಹವು ಏಕೈಕವಾಗಿ ಸ್ಥಾಪನೆಯಾಗಿರುತ್ತದೆ. ಅವರು ಕಾಮದೇವನ ಹಿಡಿತದಿಂದ ಮುಕ್ತರಾಗಿದ್ದಾರೆ ಎಂದು ಅವರನ್ನು ಆರಾಧಿಸುತ್ತಾರೆ.

ಝುಕೋಸ್ಲೋವಾಕಿಯಾದ ರಾಯಭಾರಿ ಪೆಟ್ರೋಲ್ಡ್ ಹೇಳುತ್ತಾರೆ; "ಜೈನರಲ್ಲಿಯ ದೇವರು ಎಂಬ ಕಲ್ಪನೆಯು ತರ್ಕಸಮ್ಮತವಾಗಿದೆ". ಜೈನಧರ್ಮಕ್ಕನುಸಾರವಾಗಿ ದೇವರು ಉನ್ನತವಾದ ಆತ್ಮವು, ಆದರೆ ಆತ ಶಕ್ತಿಯುತ ದೇವ ಎಂದು ಪರಿಗಣಿಸಲಾಗುವುದಿಲ್ಲ. ಅವನು ಜಗತ್ತಿನ ಸೃಷ್ಟಿಕರ್ತ ಅಥವಾ ನಿಯಂತ್ರಕನಲ್ಲ. ಜನ್ಮ ವೃದ್ಧತೆ ಹಾಗೂ ಮರಣ ಇವುಗಳು ದೇವನಿಗೆ ಅನ್ವಯಿಸುವುದಿಲ್ಲ. ಏಕೆಂದರೆ ಆತನು ಪರಿಪೂರ್ಣತೆಯನ್ನು ಪಡೆದಿರುವವನು. ಆದ್ದರಿಂದ ಆತನನ್ನು ಆರಾಧಿಸುವುದು ಹಾಗೂ ಪೂಜಿಸುವುದಕ್ಕೆ ಯೋಗ್ಯನಾಗಿರುವವನು. ಶ್ರೇಷ್ಠ ತತ್ವಜ್ಞಾನಿ ನಿತ್ಸಾನಿಯವರ ಪ್ರಕಾರ ಈತನು "ಸುಪರ್ ಮ್ಯಾನ್". ಈ ಅನುಸಂಧಾನವು ಜೈನಧರ್ಮದ ಪ್ರಶಂಶನೀಯ ಅಂಶವು.

ಜೈನಧರ್ಮದ ಪ್ರಕಾರ ಎಲ್ಲಾ ಆತ್ಮಗಳೂ ಸಮರ್ಥನೀಯವಾಗಿ ದೈವಿಕವಾಗಿವೆ? ಶ್ರೇಷ್ಠ ಆತ್ಮವು ಗೌರವಿಸಲು ಹಾಗೂ ಆರಾಧಿಸಲು ಯೋಗ್ಯವಾದುದು. ಈ ಶ್ರೇಷ್ಠ ಅಥವಾ ಪರಮ ಆತ್ಮಗಳು ತೀರ್ಥಂಕರರಾಗಿರಬಹುದು ಇಲ್ಲವೇ ಸಿದ್ಧ (ಪುರುಷ)ರಾಗಿರಬಹುದು. ತೀರ್ಥಂಕರರು ಕೊನೆಯಲ್ಲಿ ಸಿದ್ಧಾಆಗುವರು. ಅಂದರೆ ಶಾರೀರಿಕವಾಗಿ ಮುಕ್ತರಾಗುವರು. ಅರ್ಧ ಯುಗಕ್ಕೆ 24 ತೀರ್ಥಂಕರರಂತೆ ಇದ್ದರು. ಸಮಯ ಹಾಗೂ ಆವಕಾಶವು ಅಪಾರವಾಗಿರುವಂತೆ, ಇವರೂ ಸಂಖ್ಯೆಯಲ್ಲಿ ಅಗಣಿತರಾಗಿರುವವರು. ಯೋಗ್ಯವಾದ ಆತ್ಮಗಳೆಲ್ಲವೂ ತೀರ್ಥಂಕರ ಅಥವಾ ಪರಮಾತ್ಮ ಎಂದು ಅನುಮೋದಿಸಲ್ಪಡುತ್ತವೆ. ಜೈನಧರ್ಮವು ಎಲ್ಲ ಅರ್ಹ ಆತ್ಮಗಳಿಗೆ ದೇವರ ಸ್ಥಾನಮಾನವನ್ನು ನೀಡುತ್ತದೆ. ಇವರೆಲ್ಲರೂ ಪರಮೋಚ್ಛ ದೇವರಿಗೆ ಅನ್ವಯಿಸಲ್ಪಡುತ್ತಾರೆ.

THE NAVAKARA MAHA MANTRA

The Navakara Maha mantra is the holiest universal mantra, it is Shashvat, or eternally existing.

NAMO ARIHANTANAM

Adoration to the Arihant, the self conqueror, who by eliminating all the four Ghati karmas (which destroy the characteristic of the soul) while alive, elevated himself to this exalted position.

NAMO SIDDHANAM

Adoration to the Siddhas. The Siddhas are those purified and finally emancipated soul, who have destroyed all the karmas (four Ghati karmas and four Aghati karmas)

NAMO AYARIYANAM

Adoration to the Acharyas. They represent the Lord Arihant and propagate his message of truth. Having realized divine powers as a result of their own aspiration by the practice of Ahimsa,Sanyama and Tapa, they preach and show the right path for the purification of our thoughts and our actions.

NAMO UVAJJHAYANAM

Adoration to the Upadhyayas. They teach us the tenets as expounded in the holy scriptures by Teerthankaras and their accredited representatives, the Acharyas. They show us the true nature of reality existing in the cosmic order and also its potential constitutional laws and how to observe them in our practical life.

NAMO LOE SAVVASAHUNAM

Adoration to all the Saints and Ascetics of the world. They are oceans of forgiveness (Kshama) and are immersed in high and noble thoughts bestowing blessings for the betterment of all living beings.

ESO PANCH NAMUKKARO
SAVVA PAV PANASANO
MANGALANAM CH SAVVESIM
PADHAMAM HAVAI MANGALAM

(These five modes of salutation do away with all sins and of all the auspicious things are the foremost)

ಗುರು–ಉಪದೇಶಕ

ಒಂದು ಜನಪ್ರಿಯ ನಾಣ್ಣುಡಿಯಿದೆ. "ಉಪದೇಶಕ ಒಂದು ದೀವಿ ಹಾಗೂ ಉಪದೇಶಕ ಒಬ್ಬ ದೇವರು" ಗುರು ಇಲ್ಲದಲ್ಲಿ ಕತ್ತಲು ಆವರಿಸಿರುತ್ತದೆ.

ಉಪದೇಶ ಯಾರು? ಆತನು ಪರಮಾತ್ಮನೊಂದಿಗೆ (ದೇವರು) ಸಮಾಗಮ ಗೊಂಡಿರುತ್ತಾನೆ ಹಾಗೂ ಪ್ರಾಪಂಚಿಕವಾಗಿ ವಿಚ್ಛೇದನಗೊಂಡಿರುವನು. ಅವನು ಪರಮಾತ್ಮನ ಸತ್ಯಸ್ವರೂಪವನ್ನು ಬಲ್ಲನು. ಆತನಿಲ್ಲದೆ ಎಲ್ಲೆಲ್ಲೂ ಕತ್ತಲು ಆವರಿಸುತ್ತದೆ. ಅದು ಒಬ್ಬನ ಹೃದಯವಾಗಿರಲಿ, ಮನೆಯಾಗಿರಲಿ ಅಥವಾ ಬೇರೆಲ್ಲೆ ಆಗಲಿ ಒಬ್ಬ ಎಲ್ಲಿಯವರೆಗೆ ಪರಮಾತ್ಮನಲ್ಲಿ ಒಂದಾಗುವುದಿಲ್ಲವೊ ಅಲ್ಲಿಯವರೆಗೆ ಜಗತ್ತಿನಲ್ಲಿ ಬೆಳಕನ್ನು ಹೇಗೆ ಹರಿಸಬಲ್ಲನು? ವಿದ್ಯುಚ್ಛಕ್ತಿಯ ಸಂಪರ್ಕವಿಲ್ಲದೆ ಒಂದು ಎಲೆಕ್ಟ್ರಿಕ್ ಬಲ್ಬ್ ಹೇಗೆ ಬೆಳಕು ಹರಿಸಬಲ್ಲದು? ಒಬ್ಬ ಬೋಧಕನು ಪರಮಾತ್ಮನೊಂದಿಗೆ ಒಂದಾಗದೆ ಹೇಗೆ ಹೆಸರು ಪಡೆಯಬಲ್ಲನು. ಆಧ್ಯಾತ್ಮಿಕ ಹಾಗೂ ಧಾರ್ಮಿಕ ಬೆಳಕನ್ನು ದೇವರಿಂದ ಬಯಸುವ ಬೋಧಕ ಮೊದಲು ಮನೆಯಿಂದ ವಿಚ್ಛೇದನೆ ಪಡೆಯಬೇಕಾಗುತ್ತದೆ. ಆತನಿಗೆ ಸಂತಾನವಿರಕೂಡದು. ಜಗದಲ್ಲಿ ಧಾರ್ಮಿಕ ಬೆಳಕನ್ನು ಬೀರಬೇಕೆನ್ನುವವನು ತನ್ನ ಮನೆ ಹಾಗೂ ಸಂಬಂಧಿಕರೆಂಬ ಕೋಟೆಯಿಂದ ಮುಕ್ತನಾಗಿರಬೇಕು. ಬೆಳಕನ್ನು ಹರಿಸಿದ ನಂತರ ಕಿಟಕಿಗಳನ್ನು ತೆರೆದಿಡಬೇಕು. ಬೆಳಕು ದೂರದವರೆಗೂ ವಿಶಾಲವಾಗಿಯೂ ವ್ಯಾಪಿಸುವುದು. ಜ್ಞಾನ ಉಳ್ಳ ಹಾಗೂ ಭಗವಂತನಲ್ಲಿ ಲೀಲವಾದ ಮೋಕ್ಷ ಬಯಸುವ ಬೋಧಕನು ಮನೆಯಲ್ಲಿ ವಾಸಿಸುವುದು ಯೋಗ್ಯವಾದುದಲ್ಲ. ಒಂದು ಜ್ಯೋತಿಯಂತೆ ಇರುವ ಆತನು ಜಗತ್ತಿನ ತುಂಬಾ ವ್ಯಾಪಿಸಬಲ್ಲನು. ಆದ್ದರಿಂದ ಮನೆ, ಹೆಂಡತಿ, ತಂದೆ ಅಥವಾ ಬೇರೆ ಸಂಬಂಧಗಳ ಎಲ್ಲೆಯನ್ನು ಮೀರಿದವನಾಗಿರಬೇಕು.

ಒಬ್ಬ ನಿಜವಾದ ಯೋಗಿ–ಬೋಧಕನನ್ನು "ಅನಗಾರ್" ಎಂದರೆ ಮನೆ

ಇಲ್ಲದವನು ಎಂದು ಅರ್ಥ. ಆತನಿಗೆ ಇಡಿ ಜಗತ್ತೇ ಒಂದು ಮನೆ. ಅವನಿಗೆ ಅವನದೇ ಆದ ಸಂಬಂಧಿಕರಿರುವುದಿಲ್ಲ. ಏಕೆಂದರೆ ಆತನು ಜಗತ್ತಿನ ಸಂಬಂಧಿಕನಾಗಲು ಬೇರೆ ಸಂಬಂಧಗಳನ್ನು ಕಡಿದುಕೊಂಡಿರುವನು. ಆತನಿಗೆ ಮಠ, ದೇವಸ್ಥಾನ ಅಥವಾ ಮಸೀದಿಗಳ ಅವಶ್ಯಕತೆ ಇಲ್ಲ. ಎಲ್ಲ ದ್ವಾರಗಳು ಅವನಿಗಾಗಿ ತೆರೆದುಕೊಂಡಿವೆ. ಆದ್ದರಿಂದ ಜೈನ ಸಾಧು, ಒಂದು ರಾಜ ಮನೆತನದವನಾಗಿದ್ದರೂ ಮನೆ ಹಾಗೂ ಸಂಬಂಧಿಕರನ್ನು ತ್ಯಜಿಸಿ ಹೊರಗೆ ಬರಬೇಕು. ಆತನು ಆತನಿಗಾಗಿ ಮೀಸಲಾಗಿಟ್ಟಿರುವ ಶ್ವೇತ ಉಡುಪನ್ನೇ ಧರಿಸಬೇಕು. ಇದು ಆತನ ಸನ್ಯಾಸತ್ವವನ್ನು ತೋರಿಸುತ್ತದೆ. ರಣರಂಗದಲ್ಲಿ ಯುದ್ಧವಿರಾಮವನ್ನು ಘೋಷಿಸುವ ಸಂಕೇತವಾಗಿ ನಾವು ಶ್ವೇತ (ಬಿಳಿಯ) ಧ್ವಜವನ್ನು ತೋರಿಸುವುದಿಲ್ಲವೆ ಸಾಧುವಿನ ಉಡುಪು ದುರಾಸೆ ದ್ವೇಷಗಳನ್ನು ಹುಟ್ಟಿಸುವುದಿಲ್ಲ ಅಥವಾ ಇನ್ನೊಬ್ಬರನ್ನು ಸುಲಿಯಲು, ಅಪಹರಿಸಲು ಹಾತೊರೆಯುವುದಿಲ್ಲ. ಸಾಧುವು ಒಡವೆ ಆಭರಣಗಳನ್ನು ಬಯಸುವುದಿಲ್ಲ ಆತನು ಸುಗಂಧ ಪರಿಮಳಯುಕ್ತ ದ್ರವ್ಯಗಳನ್ನು ಹಾಗೂ ಪುಷ್ಪಗಳನ್ನು ಇಷ್ಟ ಪಡುವುದಿಲ್ಲ. ಆತನ ಪಾವಿತ್ರ್ಯತೆ ಹಾಗೂ ಸದ್ಗುಣಗಳೇ ಆತನ ಶೃಂಗಾರವು. ಆತನಿಗೆ ಪ್ರಾಮಾಣಿಕವಾದ ಬ್ರಹ್ಮಚರ್ಯ ಹಾಗೂ ಆದರ್ಶ ಚರಿತ್ರೆಯೇ ಸುಗಂಧ ದ್ರವ್ಯಗಳು. ಸನ್ಯಾಸಿಗಳು ಆಭರಣ ಹಾಗೂ ಸುಗಂಧ ದ್ರವ್ಯಗಳನ್ನು ಹೊಂದಿದರೆ "ಸರಳತನ" ವೆನ್ನುವುದು ಪ್ರಪಂಚದಿಂದ ಹೊರಟು ಹೋಗುವುದು.

ಒಬ್ಬ ಸಾಧು ಆದವನು ವೈಯಕ್ತಿಕವಾಗಿ ಶೃಂಗಾರಗಳಲ್ಲಿ ಲೀನವಾದರೆ ಜಗತ್ತಿಗೆ ಸರಳತನವನ್ನು ಹೇಗೆ ಬೋಧಿಸಬಲ್ಲನು? ದೇಹವನ್ನು ರಕ್ಷಿಸುವುದಕ್ಕೋಸ್ಕರ ಉಡುಪು ಧರಿಸುವನು. ಮನೆ ಹಾಗೂ ಸಂಪತ್ತನ್ನು ತೊರೆಯದವನು ಧನವನ್ನು ಕಷ್ಟದ ಕಾಲದಲ್ಲೂ ಕೂಡ ಸ್ಪರ್ಶಿಸಲಾರ. ಹಣವೇ ಅನಿಷ್ಠತೆಗೆ ಕಾರಣ. ಅದೊಂದು ಜೀವಂತ ಚಿತೆಯು. ಒಬ್ಬ ವ್ಯಕ್ತಿಯ ಜೇಬು ಹಣದಿಂದ ತುಂಬಿದ್ದರೆ ಆತನು ತನ್ನ ಹಣವನ್ನು ಯಾರಾದರೂ

ಲಪಟಾಯಿಸಬಹುದು ಎಂಬ ಭಯ ಇರುತ್ತದೆ. ಅವನಲ್ಲಿ ಸಂಪತ್ತು ಇರುವವರೆಗೆ ಆತನು ಚಿಂತೆ, ನೋವುಗಳ ಭಟ್ಟಿಯಲ್ಲಿ ದಹಿಸುತ್ತಿರುತ್ತಾರೆ. ತರ್ಕಶಾಸ್ತ್ರ ಹಾಗೂ ತತ್ವಜ್ಞಾನದ ಬಗ್ಗೆ ಯೋಚಿಸುವವನು ಇಂತಹ ನೋವುಗಳನ್ನು ತಾಳಲಾರನು. ಅದಕ್ಕೋಸ್ಕರ ಆತನು ಹಣದ ವಿಷಯದಲ್ಲಿ ನೇರವಾಗಿ ಅಥವಾ ಬೇರೆಯವರ ಮೂಲಕವೂ ವ್ಯವಹರಿಸುವ ಗೋಜಿಗೆ ಹೋಗುವುದೇ ಇಲ್ಲ. ಜೈನ ಸನ್ಯಾಸಿಗೆ ಉಳಿದುಕೊಳ್ಳಲೆಂದು ತನ್ನದೇ ಆದ ಮನೆ–ಮಠ ಇರುವುದಿಲ್ಲ.

ಒಬ್ಬ ಜೈನ ಸನ್ಯಾಸಿಗೆ ತನ್ನ ಶರೀರವನ್ನು ಮುಚ್ಚಿಕೊಳ್ಳಲು ಕೆಲವೇ ವಸ್ತ್ರ ಹಾಗೂ ಮಲಗಲು ಒಂದು ಉಣ್ಣೆಯ ಹಾಸು, ಬಟ್ಟೆ, ಅಷ್ಟೇ ಬೇಕಾಗಿರುವುದು. ಆತನು ಆಹಾರಕ್ಕಾಗಿ ಕೆಲವೇ ಬಿಕ್ಷಾ ಪಾತ್ರೆಗಳನ್ನು ಹೊಂದಿರುತ್ತಾನೆ. ಆದರಾತಿಥ್ಯದ ಸಂಪ್ರದಾಯವಿರುವುದರಿಂದ ಆತನು ಆಹಾರ ಹಾಗೂ ನೀರನ್ನು ಎಲ್ಲಿಂದಾದರೂ ಸಂಗ್ರಹಿಸಲೇ ಬೇಕಾಗುತ್ತದೆ. ಏಕೆಂದರೆ ನಮ್ಮ ದೇಶದಲ್ಲಿ ಅನ್ನದಾನ ಮಾಡುವ ಸಂಪ್ರದಾಯ ಇದ್ದೇ ಇದೆ. ಆತನು ಬಿಕ್ಷಾಟನೆಗೆ ಹೊರಟಾಗ ಅನೇಕ ಕಡೆಯಿಂದ ಆಹಾರವನ್ನು ಸಂಗ್ರಹಿಸಬೇಕಾಗುತ್ತದೆ. ದುಂಬಿಯು ಹೂವಿನಿಂದ ಜೇನನ್ನು ಸಂಗ್ರಹಿಸುವಂತೆ ಆತನು ಆಹಾರವನ್ನು ಸಂಗ್ರಹಿಸುತ್ತಾನೆ. ಆದ್ದರಿಂದ ಆತನು ಊಟಕ್ಕೆಂದೇ ಸಂದರ್ಶಿಸಬೇಕಿಲ್ಲ. ಆತನಿಗೆ ಆತನದೇ ಆದ ಆಹಾರದ ಇಷ್ಟದ ಆಹಾರಗಳಿರುತ್ತವೆ. ಹಳ್ಳಿ, ಪಟ್ಟಣ ಹಾಗೂ ನಗರಗಳಲ್ಲಿ ದೊರೆಯುವ ರೊಟ್ಟಿಯ ತುಣುಕುಗಳು ಆತನಿಗೆ ಇಷ್ಟ. ಚಪಾತಿಯ ತುಣುಕುಗಳಿಂದ ತೃಪ್ತನಾಗುವನು ಹೊರತು ಮೃಷ್ಠಾನವನ್ನು ಇಷ್ಟಪಡುವುದಿಲ್ಲ. ಮಿಕ್ಕಿದ ಆಹಾರವನ್ನು ಮರುದಿನಕ್ಕಾಗಿ ಕಾಯ್ದಿರಿಸುವುದಿಲ್ಲ. ಏಕೆಂದರೆ ಆಹಾರವನ್ನು ಒಂಭತ್ತು ಗಂಟೆಗಳಿಗಿಂತ ಹೆಚ್ಚು ಹೊತ್ತು ಕಾಯ್ದಿರಿಸುವುದು ಸೂಕ್ತವಲ್ಲ. ಸೂರ್ಯೋದಯವಾಗಿ ಒಂದು ಗಂಟೆಯ ನಂತರ ಹಾಗೂ ಸೂರ್ಯಾಸ್ತಕ್ಕೆ ಮುನ್ನ ಆಹಾರವನ್ನು ಸೇವಿಸುವನು, ತನಗೆ ಪಚನವಾಗಬಲ್ಲ ಆಹಾರಕ್ಕಿಂತ ಸ್ವಲ್ಪ ಕಡಿಮೆ ಆಹಾರವನ್ನೇ ಸೇವಿಸುವನು.

ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ ಆತನಿಗೆ ಆಹಾರದ ಬಗ್ಗೆ ಹೆಚ್ಚಿನ ಆಸಕ್ತಿ ಇರುವುದಿಲ್ಲ. ಮನುಷ್ಯ ನಶ್ವರನಾಗಿರುವುದರಿಂದ ತಪಸ್ಸು ಹಾಗೂ ಉಗ್ರಸಂಯಮತೆಯಿಂದ ತನ್ನ ಶರೀರವನ್ನು ಕೃಶ ಮಾಡಿಕೊಳ್ಳಬೇಕಾಗುತ್ತದೆ. ಹದಿನೈದು ದಿನಗಳಿಗೊಮ್ಮೆಯಾದರೂ ಉಪವಾಸ ಆಚರಣೆ ಮಾಡುವನು. ಕೆಲವು ಸಂದರ್ಭಗಳಲ್ಲಿ ಹೆಚ್ಚು ಕಾಲ ಉಪವಾಸ ಮಾಡುವುದೂ ಉಂಟು. ಅವನು ವರ್ಷಗಟ್ಟಲೆ ಒಣ ಹಾಗೂ ಎಣ್ಣೆರಹಿತ ಆಹಾರವನ್ನು ಸೇವಿಸುವನು. (ತಪಸ್ಸಿಗೆ "ಅಯಾಂಬಿಲ್" ಎನ್ನುವರು). ಈತನು ಜೀವನವಿಡಿ ಇಲ್ಲದಿದ್ದರೂ ಕೆಲವು ನಿಯಮಿತ ಅವಧಿಯವರೆಗಾದರೂ, ಕೆಲವೇ ನಿಯಮಿತ ಆಹಾರವನ್ನು ಸೇವಿಸುವ ಕಾಯಕವನ್ನು ಮಾಡಬಹುದು.

ಈ ಸಾಧುಗಳು ಪ್ರತಿದಿನವೂ ಭಾರತದ ಒಂದು ಸ್ಥಳದಿಂದ ಇನ್ನೊಂದೆಡೆಗೆ ನಡೆದುಕೊಂಡು ಹೋಗುವುದನ್ನು ಕಂಡಿದ್ದೇವೆ. ಸಾಧುವು ಬರಿಗಾಲಿನಲ್ಲಿ ನಡೆಯುವನು– ಯಾವುದೇ ಋತುವಾಗಿರಲಿ, ಎಂಥದೇ ಪ್ರದೇಶವಾಗಿರಲಿ, ಅದರಂತೆ ಯಾವ ಪ್ರಕಾರದ ವಾಹನವನ್ನೂ ಬಳಸುವುದಿಲ್ಲ. ಎಂಥ ಆಹ್ಲಾದಕರವಾದ ಹಾಗೂ ಸ್ವತಂತ್ರ ಜೀವನ। ಕಾಯಿಲೆಗಳು ಆತನನ್ನು ಪ್ರತಿದಿನ ಸತ್ತು ಹೋಗುವುದನ್ನು ತಡೆಯಲಾರದು. ಕಷ್ಟಕರವಾಗಿರದಿದ್ದರೆ ಸನ್ಯಾಸತ್ವದ ಅರ್ಥವಾದರೂ ಏನು? ಈ ಶರೀರವು ಒಂದಿಲ್ಲೊಂದು ದಿನ ನಶಿಸುವುದು ಏಕೆಂದರೆ ಇದು ಐದು ಮೂಲಧಾತುಗಳಿಂದ ಸಿದ್ಧಗೊಂಡಿರುವುದು ಈತನು ತನ್ನ ರಕ್ಷಣೆಗಿಂತ ಪರರ ರಕ್ಷಣೆ ಮಾಡಲು ಇಷ್ಟಪಡುವನು, ಕ್ರಿಮಿಕೀಟಗಳು ಪಾದರಕ್ಷೆಗಳಿಗೆ ಸಿಕ್ಕು ಸಾಯಬಾರದೆಂದು ಬರಿಗಾಲಿನಲ್ಲೇ ನಡೆಯುವನು.

ಈತನು ತನ್ನ ಸಹನಾ ಶಕ್ತಿಯನ್ನು ವರ್ಧಿಸಲೆಂದೇ ಎಷ್ಟೇ ತೊಂದರೆ ಉಂಟಾದರೂ ಅನೇಕ ಧಾರ್ಮಿಕ ಸಭೆಗಳಲ್ಲಿ ಪಾಲ್ಗೊಳ್ಳುವನು. ಮಿಕ್ಕ ಸಮಯವನ್ನು ಧಾರ್ಮಿಕ ಚರ್ಚೆಗಳ ಮೂಲಕ ಅಧ್ಯಯನ ಮಾಡುವುದು ಹಾಗೂ ಪ್ರಾಚೀನ ಧರ್ಮಗ್ರಂಥಗಳ ಪಠಣ ಮಾಡುವುದಕ್ಕಾಗಿ

ಉಪಯೋಗಿಸಿಕೊಳ್ಳುವನು. ಆದ್ದರಿಂದ ಈತ ಅನಾವಶ್ಯಕ ಹರಟೆಗಳಲ್ಲಿ ವೃಥಾ ಸಮಯ ವ್ಯರ್ಥ ಮಾಡಿಕೊಳ್ಳುವುದಿಲ್ಲ. ಇದರಿಂದ ಸಾವಿರಾರು ವರ್ಷಗಳ ಹಿಂದಿನ ಧರ್ಮಗ್ರಂಥಗಳನ್ನು ಧಕ್ಕೆಯಾಗದಂತೆ ಭದ್ರವಾಗಿ ಉಳಿಸಿಕೊಳ್ಳಬಲ್ಲ ಅಷ್ಟೇ ಅಲ್ಲ ಕಾಲಾನುಕ್ರಮ ಸಮೃದ್ಧಗೊಳಿಸುವಲ್ಲಿ ಹಾಗೂ ಅಭಿವೃದ್ಧಿಗೊಳಿಸುವಲ್ಲಿ ಯಶಸ್ವಿಯಾಗುವನು. ಆತನಿಗೆ ಜ್ಞಾನವೇ ಸಂಪತ್ತು, ಅದಕ್ಕೋಸ್ಕರ ಹೆಚ್ಚೆಚ್ಚು ಜ್ಞಾನ ಸಂಪಾದಿಸಲು ಆತುರನಾಗಿರುತ್ತಾನೆ. ಬೆಳೆಯನ್ನು ಬೆಳೆಯಲು ಭೂಮಿಯನ್ನು ಊಳುವಂತೆ, ಜ್ಞಾನವನ್ನು ಸಂಪಾದಿಸಲು ಶಾರೀರಿಕವಾಗಿ ಕಷ್ಟಪಡಬೇಕಾಗುತ್ತದೆ.

ಈತನು ತಲೆಯ ಹಾಗೂ ಗಡ್ಡದ ಕೇಶವನ್ನು ಮುಂಡಾಯಿಸುವನು. ಪ್ರತಿದಿನವೂ ಶೇವಿಂಗ್ ಮಾಡಿಕೊಳ್ಳಲು ಸಮಯವ್ಯಕ್ತ ಮಾಡಲು ಸಿದ್ಧನಿಲ್ಲ. ಅದಕ್ಕೋಸ್ಕರ ಸ್ವತಃ ತಾನೇ ಕ್ಷೌರಿಕನಾಗಿ ಅಗತ್ಯವಿರುವ ವಸ್ತುಗಳನ್ನು ತನ್ನೊಂದಿಗೆ ಇರಿಸಿಕೊಳ್ಳುವನು ಅಥವಾ ಅದಕ್ಕೋಸ್ಕರ ಹಣವನ್ನು ತೆಗೆದಿರಿಸಬೇಕಾಗುತ್ತದೆ. ನಿಜವಾದ ಸಾಧುವಿನ ಉದ್ದೇಶಗಳೇ ಭಿನ್ನವಾಗಿರುತ್ತವೆ. ಆತನಿಗೆ ಕ್ಷೌರಿಕನೂ ಬೇಡ, ಹಣವೂ ಬೇಡ. ಆತನು 4–6 ತಿಂಗಳುಗಳ ನಂತರವೇ ಕೇಶ ಮಂಡನೆ ಮಾಡಿಕೊಳ್ಳುವ ಅಭ್ಯಾಸ ಇರಿಸಿಕೊಳ್ಳುವನು. ಕೈಲಾಗದ ಸಾಧುವು ಇದು "ದುರ್ಭರ" ವಾದುದು ಎಂದು ಹೇಳುವನು. ಧೈರ್ಯವಂತನು ಇದನ್ನೊಂದು ಮನರಂಜನೆಯಾಗಿ ತೆಗೆದುಕೊಳ್ಳುವನು. ಒಬ್ಬನು ತನ್ನ ಶರೀರದ ಬಗ್ಗೆ ಮೃದು ಆದಂತವನಾಗಿದ್ದರೆ, ಆ ಶರೀರವು ಆತನನ್ನೇ ಆಡಿಸಬಲ್ಲದು. ಇಂತಹ ದುರ್ಭರಗಳನ್ನು ವರ್ಷದಲ್ಲಿ ಎರಡು ಸಲ ಪ್ರಯೋಗಿಸಿದರೆ ಆಂತರಿಕ ಶಕ್ತಿಯು ಜಾಗೃತವಿದೆ ಎಂದು ಶರೀರವು ಅರ್ಥ ಮಾಡಿಕೊಳ್ಳುವುದು. ಒಬ್ಬ ರಾಜನನ್ನು ಗೆಲ್ಲಬೇಕಾದರೆ ಆ ರಾಜನ ಅರಮನೆಯನ್ನು ಅಥವಾ ರಾಜಧಾನಿಯನ್ನು ಕೈವಶ ಮಾಡಿಕೊಳ್ಳಬೇಕಾಗುತ್ತದೆ. "ಮನಸ್ಸು" ಅರಮನೆಯಾಗಿದ್ದರೆ "ಶರೀರ" ವು ರಾಜಧಾನಿಯಾಗಿರುತ್ತದೆ. ಮನಸ್ಸನ್ನು ನಿಯಂತ್ರಣಕ್ಕೆ ತರಬೇಕಾದರೆ ಮೊದಲು

ಶರೀರವನ್ನು ನಿಯಂತ್ರಣಕ್ಕೆ ತರಬೇಕು. ಆತ್ಮವನ್ನು ಜಯಿಸಬೇಕಾದರೆ ಮನಸ್ಸನ್ನು ನಿಯಂತ್ರಿಸಬೇಕು. ಶರೀರವನ್ನು ಗೆಲ್ಲದ ಹೊರತು ಮನಸ್ಸನ್ನು ಗೆಲ್ಲಲು ಸಾಧ್ಯವಿಲ್ಲ. ಮನಸ್ಸನ್ನು ಗೆಲ್ಲದೆ ಆತ್ಮವನ್ನು ಗೆಲ್ಲಲು ಸಾಧ್ಯವಿಲ್ಲ. ಹಾಗೇ ಶ್ರೇಷ್ಠ ಆತ್ಮವಾಗಲು ಸಾಧ್ಯವಿಲ್ಲ. ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ ಸಾಧುವು ಶರೀರ, ಮನಸ್ಸು ಹಾಗೂ ನುಡಿಯನ್ನು ನಿಯಂತ್ರಿಸುವನು.

ಆತನು "ನನ್ನದು" ಹಾಗೂ "ನಿನ್ನದು" ಎಂಬುವ ಭಾವನೆಗಳಿಗಿಂತ ತುಂಬಾ ಉನ್ನತದಲ್ಲಿ ಇರುವನು. ಅಹಿಂಸೆ ಹಾಗೂ ಅನುಕಂಪಗಳು ಆತನ ಪ್ರತಿದಿನದ ಚಟುವಟಿಕೆಗಳಲ್ಲಿ ಕಾಣುವುದು ತುಂಬಾ ಸುಲುಭ. ಆತನ ಶಬ್ದಗಳು ಪ್ರತಿಯೊಂದು ಜೀವಕಣಗಳಿಗೆ ಪ್ರೀತಿಯನ್ನು ಹೊರಹೊಮ್ಮಿಸುತ್ತದೆ. ಆತನು ಮಾತನಾಡಿದಾಗ ಆತನ ಶಬ್ದಗಳು ಪ್ರತಿಯೊಂದು ಜೀವಿತವಾಗಿರುವವರಿಗೆ ಒಳತಾಗಿರುವುದು. ಆತನು ಎಂದೂ ಸುಳ್ಳು ಮಾತನಾಡಲಾರ. ಆತನು ಒಂದು ಹುಲ್ಲು ಕಡ್ಡಿಯನ್ನು ಕೂಡ ಅಪ್ಪಣೆ ಇಲ್ಲದೆ ತೆಗೆದುಕೊಳ್ಳಲಾರ. ಆತ ಬ್ರಹ್ಮಚರ್ಯವನ್ನು ಪಾಲಿಸಲೇಬೇಕು. ಆತನು ಬ್ರಹ್ಮನಿಗೆ ಸಂಬಂಧ ಪಟ್ಟವನು ಅಂದರೆ ಪರಮ ಆತ್ಮ ಎಂದರ್ಥ. ಅದಕ್ಕೋಸ್ಕರ ಆತನಿಗೆ ಪತ್ನಿಯಿಲ್ಲ. ಆತನು ಮಾನಸಿಕವಾಗಿ ಹಾಗೂ ಶಾರೀರಕವಾಗಿ ಸುಖಭೋಗಗಳನ್ನು ತ್ಯಜಿಸಿರುವನು.

ಆತನು ಪ್ರಾಪಂಚಿಕ ಸಿರಿ–ಸಂಪತ್ತುಗಳಿಂದ ದೂರವಿರುವನು. ಆತನು ಇನ್ನೊಬ್ಬರಿಗೆ ಹೊಣೆಯಾಗುವುದನ್ನು ನಿಲ್ಲಿಸಿ ಬಿಟ್ಟಿರುವನು. ವಾಸ್ತವವಾಗಿ ಇನ್ನೊಬ್ಬರ ಕಷ್ಟ–ಭವಣೆಗಳನ್ನು ಹೋಗಲಾಡಿಸಲು ಸಿದ್ಧನಿರುವನು. ಇನ್ನೂ ಹೇಳಬೇಕೆಂದರೆ ಆತನು ತನಗಾಗಿ ಹಾಗೂ ಪರರಿಗಾಗಿ ಒಳಿತನ್ನು ಮಾಡಲು ಉತ್ಸುಕನಾಗಿರುತ್ತಾನೆ. ತೀರ್ಥಂಕರರು ಹಾಕಿಕೊಟ್ಟ ಮಾರ್ಗದಲ್ಲಿಯೇ ನಡೆಯಬೇಕು. ಜನರನ್ನು ಕತ್ತಲಿನಿಂದ ಬೆಳಕಿನಡೆಗೆ ಸಾಗಿಸುವ ಬೋಧಕನಿಗೆ "ಗುರು" ಎಂದು ಕರೆಯುವರು. ಇಂತಹ ಬೋಧಕ ಅಥವಾ ಮಾರ್ಗದರ್ಶಕನಿಲ್ಲದೆ ನಾವು ಶಾಶ್ವತವಾಗಿ ಕತ್ತಲಿನಲ್ಲಿ ಇರಬೇಕಾಗುತ್ತದೆ.

METAPHYSICS OF JAINISM

There are nine cardinal principles in Jain Meta physics. They are **Navtatvas,**

1. Conscious Soul (Jeev)
2. Unconscious i.e. matter (Ajeev)
3. Influx of karma, the particles of matter (Aasrav)
4. Bondage of the soul (Bandh)
5. Virtue (Punya)
6. Sin (Pap)
7. Arrest of the influx of karma (Samvar)
8. Partial Elimination of karma or shedding out eight varieties of karma from the soul (Nirjara)
9. Total elimination of karma. Liberation or Moksha.

These nine principles are minutely analysed in the holy scriptures.

Right Faith,Right knowledge and Right Conduct are called the three Jewels of Jainism. They lead a person to final liberation.

The world is beginingless and eternal. Every material object is constantly undergoing changes, but nothing ever perishes or disappears out of existence. All objects are naturally created and destroyed as a result of modifications of the Conscious Soul and the Unconscious Matter.

ಧರ್ಮ–ಅಹಿಂಸೆ

ಒಂದು ಇರುವೆಯಾಗಿರಲಿ ಅಥವಾ ಒಂದು ಆನೆಯಾಗಿರಲಿ ತಮ್ಮ ತಮ್ಮ ಪ್ರಾಣವು ಎಲ್ಲರಿಗೂ ಇಷ್ಟ. ಯಾರು ಸಾಯಬೇಕೆನ್ನುತ್ತಾರೆ? ಖಂಡಿತವಾಗಿಯೂ ಯಾರೂ ಸಾಯಲು ಬಯಸುವುದಿಲ್ಲ. ಕಷ್ಟದ ಸಮಯದಲ್ಲಿ ಬಾಧೆಯನ್ನು ತಾಳಲಾರದೆ ಸತ್ತರೆ ಚೆನ್ನಾಗಿತ್ತು ಎಂದು ಯೋಚಿಸಬಹುದು, ಆದರೆ ಕಷ್ಟಕಾಲ ಕಳೆದು ಹೋದನಂತರ ಪುನಃ ಬದುಕಲು ಹಾತೊರೆಯುತ್ತಾನೆ. ನಾವು ಜ್ಞಾಪಕದಲ್ಲಿಟ್ಟು ಕೊಳ್ಳಬೇಕಾದುದು ಏನೆಂದರೆ, ಕೇವಲ ಧರ್ಮವು ಮಾತ್ರ ಜೀವಿಸುವ ಹಕ್ಕನ್ನು ರಕ್ಷಿಸಿಕೊಳ್ಳಲು ಆಜ್ಞಾಪಿಸುತ್ತದೆ. ಅಪ್ರಮುಖವಾದ ಹಾಗೂ ಚಿಕ್ಕ ಜೀವಿಗಳು ಜೀವಿಸಲು ಹಕ್ಕಿಲ್ಲ. ಕೇವಲ ಬಲಶಾಲಿ ಜೀವಿಗಳು ಮಾತ್ರ ಬದುಕಬೇಕೆಂಬ ಮಾತನ್ನು ಧರ್ಮವು ತಳ್ಳಿ ಹಾಕುವುದು. ನಿಜ ಹೇಳಬೇಕೆಂದರೆ ನಿಜವಾದ ಧರ್ಮವು ಎಲ್ಲರ ಒಳಿತನ್ನು ಬಯಸುವುದು. ಇದು ತಾಯಿಯು ಮಗುವನ್ನು ಜೋಪಾನವಾಗಿ ನೋಡಿಕೊಳ್ಳುವಂತೆ. ನಿಜವಾದ ಧರ್ಮವು ಅಹಿಂಸೆ ಹಾಗೂ ಅನುಭೂತಿಯನ್ನು ಕಲಿಸುತ್ತದೆ. ಬೇರೆಯವರಿಗೆ ತೊಂದರೆ ಉಂಟು ಮಾಡಲು ಕಾರಣವಾದ ಧರ್ಮವೂ ಒಂದು ಧರ್ಮವೇ? ನಿಜವಾದ ಧರ್ಮವು ಬದುಕಿರುವ ಯಾವ ಜೀವಿಗೂ ನೋವುಂಟು ಮಾಡುವುದಿಲ್ಲ. ದಾರಿ ತಪ್ಪಿದ ಎಷ್ಟೋ ಜನರು ಜಗತ್ತಿನಲ್ಲಿರುವ ಅಮಾಯಕರನ್ನು ಸಾಯಿಸುವುದೇ ತಮ್ಮ ಕರ್ತವ್ಯ ಎಂದು ಯೋಚಿಸುತ್ತಾರೆ. ಬೇರೆ ಧರ್ಮವನ್ನು ಅನುಸರಿಸುವವರನ್ನು ಸಾಯಿಸುವುದು ಕೆಲವು ಮೂಲಭೂತ ವಾದಿಗಳ (ಸನಾತಿನಿ) ಧಾರ್ಮಿಕ ಶ್ರದ್ಧೆ ಎಂದು ನಂಬುವವರೂ ಇದ್ದಾರೆ. ಆದರೆ ಬೇರೊಬ್ಬನನ್ನು ಆತನು ಪಾಪಿಯೇ ಆಗಿರಲಿ ಸಾಯಿಸುವುದರಿಂದ ಯೋಗ್ಯತೆಯನ್ನು ಪಡೆಯುವನು ಎನ್ನುವುದು ಎಷ್ಟು ಮುರ್ಖತನ?.

ಬೇರುಗಳಿಲ್ಲದೆಯೇ ಗಿಡ–ಮರಗಳು ಇರಲು ಸಾಧ್ಯವೇ? ಟೊಂಗೆಗಳನ್ನು ಕತ್ತರಿಸಿ ಬೇರುಗಳಿಗೆ ನೀರು, ಗೊಬ್ಬರ ಉಣಿಸಿದರೆ ಗಿಡವನ್ನು ನಾಶ ಪಡಿಸಲು ಸಾಧ್ಯವೇ? ನಿಜವಾದ ಧರ್ಮವು ಪಾಪವನ್ನು ಹೋಗಲಾಡಿಸಲು ಬಯಸುತ್ತದೆ ಹೊರತು, ಪಾಪಿಯನ್ನು ನಿರ್ನಾಮ ಮಾಡುವುದಿಲ್ಲ. ಪಾಪಿಷ್ಟನ ಸುತ್ತಲೂ ಪಾಪವು ಆವರಿಸಿರುವವರೆಗೂ ಆತ ಇರಬಲ್ಲನು.

ದುರಾದೃಷ್ಟದಿಂದ ಧರ್ಮವು ಇತಿಹಾಸದ ತುಂಬ ಕೇವಲ ಕಚ್ಚಾಟ, ಕಲಹ,

ಧರ್ಮಯುದ್ಧ, ಜೆಹಾದ್‌ಗಳೇ ಇರುವವು. ಆಗ ಕೇವಲ ಪರಮತದ ವೈರವಿತ್ತು ಎಂದು ಇತಿಹಾಸವು ಹೇಳುತ್ತದೆ. ಈ ಕಚ್ಚಾಟಗಳು ಕೇವಲ ಪರಮತ ವೈರದಿಂದ ಹುಟ್ಟಿದುವವು ಅಲ್ಲದೆ, ಇದು ಮೂರ್ಖತನ ಹಾಗೂ ಅಜ್ಞಾನದಿಂದ ಉಂಟಾದುದು. ಈ ಧಾರ್ಮಿಕ ಕಲಹಗಳು ಪರಮತ ವೈರತ್ವಕ್ಕಿಂತ ತಪ್ಪು ತಿಳುವಳಿಕೆಯಿಂದ ಉಂಟಾದದ್ದು. ಧರ್ಮವು ಬೇರೆ ಧರ್ಮದವರನ್ನು ತಮ್ಮನ್ನು ಅನುಸರಿಸಲು ಒತ್ತಾಯಿಸುವುದಿಲ್ಲ. ಅದು ಒಬ್ಬನ ಸ್ವಯಂ ಸ್ಫೂರ್ತಿಯಿಂದ ಪ್ರತಿಕ್ರಿಯಿಸುವುದಾಗಿದೆ.

ಶ್ರೇನಿಕ್ ಎಂಬ ರಾಜನ ಸಾಮ್ರಾಜ್ಯದಲ್ಲಿ ಕಲ್ಸೌಕ್ರಿಕ್ ಎಂಬ ಕಟುಕನಿದ್ದನು. ಆತನು ಪ್ರತಿದಿನವೂ 500 ಎಮ್ಮೆಗಳನ್ನು ಸಾಯಿಸುತ್ತಿದ್ದ. ಆತನು ಇನ್ನು ಮುಂದೆ ಪ್ರಾಣಿವಧೆ ಮಾಡಕೂಡದೆಂದು ಆತನನ್ನು ಒಂದು ಆಳವಾದ ಭಾವಿಗೆ ತಳ್ಳಲಾಯಿತು. ಆದರೆ ಆತನು ಅಲ್ಲಿ ಮಣ್ಣಿನಲ್ಲಿ ಎಮ್ಮೆಯ ಗೊಂಬೆಗಳನ್ನು ಮಾಡಿ ಅವುಗಳನ್ನು ನಾಶಪಡಿಸುತ್ತಾ ಸಂತೋಷ ಪಡುತ್ತಿದ್ದನು. ಅದು ಅವನ ಅಂತರಾಳದಲ್ಲಿರುವ ಹಿಂಸಾತ್ಮಕ ವೃತ್ತಿಯ ಫಲಿತಾಂಶ. ರಾಜನು ಕಟುಕನನ್ನು ಹಿಂಸೆ ಮಾಡುವುದನ್ನು ತಡೆದೆನು ಎಂದು ಸಂತೋಷ ಪಟ್ಟಿದ್ದರೂ ಆತನಲ್ಲಿರುವ ಹಿಂಸಾತ್ಮಕ ಅಂಶವನ್ನು ಹೋಗಲಾಡಿಸಲು ಸಾಧ್ಯವಾಗದ ಆ ಶಿಕ್ಷೆಯನ್ನು ಕೊಟ್ಟು ಏನು ಪ್ರಯೋಜನ?.

ಪಾಪಿಯ ಬಗ್ಗೆಯೂ ನಮಗೆ ಕರುಣೆ ಸಹಾನುಭೂತಿ ಇರಬೇಕು. ನಿಜವಾದ ಧರ್ಮವು ಅನ್ಯ ಧರ್ಮವನ್ನು ದ್ವೇಷಿಸು ಎಂದು ಹೇಳುವುದಿಲ್ಲ. ಅದು ಬೇರೆಯವರೊಂದಿಗೆ ಕರುಣೆ, ಪ್ರೀತಿ, ಸಹಾನುಭೂತಿಯಿಂದ ವರ್ತಿಸಬೇಕು ಎಂಬುದನ್ನು ಕಲಿಸಿಕೊಡುತ್ತದೆ. ಆದ್ದರಿಂದ ಧರ್ಮದ ಮೂಲತತ್ವವು ಅಹಿಂಸೆಯಾಗಿರುತ್ತದೆ.

ಅತ್ಯಂತ ಆಳವಾದ ನಾಸ್ತಿಕತೆ "ಸಮರ್ಥರಾದವರು ಬದುಕಬೇಕು" ಎಂಬ ಬೋಧನೆಯಲ್ಲಿ ಇದೆ ಎಂದರೆ ಬಲಶಾಲಿಯಾದವನು ಬದುಕಬೇಕು, ನಿರ್ಬಲವಾದವನು ನಶಿಸಬೇಕು ಎನ್ನುವುದೇ? ವಿಶ್ವದಲ್ಲೇ ಅತ್ಯಂತ ಉನ್ನತ ಹಾಗೂ ಬಲಶಾಲಿಯಾದವನು ಎಂದರೆ ಮನುಷ್ಯನೇ. ಆದರೂ ಕೂಡ ಆತನು ಬೇರೆ ಜೀವಿಗಳನ್ನು ಸಾಯಿಸಕೂಡದು. ಆದರೆ ಬದುಕಲು ಸಹಾಯ ಮಾಡಬೇಕು. ಒಬ್ಬ ಜಾಣ ವ್ಯಕ್ತಿಯು ಹೇಳುವುದೇನೆಂದರೆ, ಒಂದು ವೇಳೆ ಹಿಂಸೆಯೇ

ಧರ್ಮವಾಗಿದ್ದರೆ ಅಧರ್ಮದ ಅರ್ಥ ಏನಾಗುತ್ತಿತ್ತು? ಯಾವುದೇ ಕಾರಣವಿಲ್ಲದೆಯೇ ಒಬ್ಬನನ್ನು ಸಾಯಿಸುವುದು ಅಧರ್ಮವು, ಸಾಯಲ್ಪಡುವವನು ಚಿಕ್ಕವನೇ ಆಗಿರಬಹುದು, ದೊಡ್ಡವನೇ ಆಗಿರಬಹುದು, ತಪ್ಪಿತಸ್ಥನೇ ಇರಬಹುದು ಅಮಾಯಕನೇ ಆಗಿರಬಹುದು, ಇದು ಒಬ್ಬ ಜೈನ ಮುನಿಯಲ್ಲಿ ಅಥವಾ ಜೈನ ಸಾಮಾನ್ಯ ವ್ಯಕ್ತಿಯಲ್ಲಿ ಕಂಡು ಬರುವುದಿಲ್ಲ.

ಲೋಕಮಾನ್ಯ ತಿಲಕ್‌ರವರು ಹೇಳಿದ್ದರು. ಭಾರತವನ್ನು ಹಿಂಸೆಯೆಂಬ ವಿನಾಶದಿಂದ ಬದುಕಿಸಿದ್ದೇ ಜೈನ ಧರ್ಮವು. ಜೈನ ಧರ್ಮದ ಮೂಲಕವೇ ಶಾಖಾಹಾರತ್ವವು ಇಂದಿಗೂ ಗುಜರಾತ್‌ನಲ್ಲಿ ಎಲ್ಲೆಲ್ಲೂ ಜಾರಿಯಲ್ಲಿದೆ. ಒಳಿತನ್ನು ಯೋಚನೆ ಮಾಡುವವರೆಲ್ಲ ಒಪ್ಪಿಕೊಳ್ಳುವ ವಿಚಾರವೇನೆಂದರೆ ಜೈನರ ಮನೆಯಲ್ಲಿ ಬಾಲ್ಯದಿಂದಲೇ ಮಕ್ಕಳಿಗೆ ಅಹಿಂಸಾ ವಾದವನ್ನು ಬೋಧಿಸಲಾಗುತ್ತದೆ. ಯಾರಾದರೂ ಜೈನ ಮತಸ್ಥರ ಮನೆಗೆ ಹೋಗಿ ಮಕ್ಕಳಿಗೆ ತರಕಾರಿಯನ್ನು ಕತ್ತರಿಸಿ ಎಂದು ಹೇಳಿದರೆ ಕೋಪಿಸಿಕೊಳ್ಳುವರು. ಅದರ ಸರಿಯಾದ ಸಂಬೋಧನೆಯು ಸ್ವಚ್ಛಗೊಳಿಸು ಹೊರತು ಕತ್ತರಿಸು ಎಂದು ಅಲ್ಲ. ಮನುಷ್ಯ ಬದುಕುಲು ತಿನ್ನಲೇಬೇಕು, ಬದುಕಲು ಏನಾದರೂ ಸಂಪಾದನೆ ಮಾಡಲೇಬೇಕಾಗುತ್ತದೆ. ಆದರೆ ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಮಾನಸಿಕವಾಗಿ, ಶಾರೀರಿಕವಾಗಿ ಹಾಗೂ ಮಾತು, ನಡೆ–ನುಡಿಗಳಲ್ಲಿ ಅಹಿಂಸೆಯನ್ನು ಪಾಲಿಸಬೇಕು.

"ಕತ್ತರಿಸು" ಎಂಬುದು "ಕ್ರೂರತೆ" ಎಂಬ ಶಬ್ದಕ್ಕೆ ಸಂಬಂಧಿಸಿದುದು, ಹಾಗೂ ಶಾಂತಿಭಂಗ ಮಾಡುವುದು, ಅದೇ "ಸ್ವಚ್ಛಗೊಳಿಸು" ಎಂಬುದು ತಂಪುಗೊಳಿಸುವುದು. ಕುಮಾರಪಾಲ ಎಂಬ ಅರಸನ ಕಾಲಕ್ಕೆ "ಕತ್ತರಿಸು" "ಸಾಯಿಸು" ಎಂಬ ಶಬ್ದಗಳನ್ನು ಪ್ರಜೆಗಳು ಪ್ರಯೋಗಿಸುತ್ತಿರಲಿಲ್ಲ. ಇಂದಿಗೂ ಆ ಸಾಮ್ರಾಜ್ಯದ ಪ್ರದೇಶದಲ್ಲಿ ಅದರ ಪ್ರಭಾವವು ಕಂಡುಬರುತ್ತದೆ. ನಿಸ್ಸಂಶಯವಾಗಿಯೂ ವ್ಯಾಪಕವಾಗಿಯೂ ಅಹಿಂಸೆಯನ್ನೇ ಧಾರ್ಮಿಕವಾಗಿ ಪ್ರತಿಪಾದಿಸುವರು, ಅದು ವರ್ಧಿಸಿದಷ್ಟು ಧರ್ಮವು ಸತ್ಯ, ಕೀರ್ತಿಯುಕ್ತ ಹಾಗೂ ಸಮರ್ಪಕವಾಗಿರುತ್ತದೆ. ಕೆಲವು ಧರ್ಮಗಳಿವೆ. ಅವು ಸತ್ಯತೆ, ಅಹಿಂಸೆ, ಮನಸಾರೆ ಕೊಡದಿರುವುದನ್ನು ಸ್ವೀಕರಿಸದೆ ಇರುವುದು, ಬ್ರಹ್ಮಚರ್ಯ, ನಿಷ್ಕಪಟತೆ ಮುಂತಾದ ಶಿಸ್ತುಗಳೆಡೆ ಬಾಗುವುದು. ತಮ್ಮ ಪತ್ನಿಯರನ್ನು ಬಿಟ್ಟು ಮಿಕ್ಕ ಎಲ್ಲಾ ಸ್ತ್ರೀಯರನ್ನು ತಾಯಿಯೆಂದು ಭಾವಿಸಬೇಕು. ಪರರಿಗೆ ಸಂಬಂಧಿಸಿದ ಧನಸಂಪತ್ತು ಮಣ್ಣಿನಿಂದ

ಮಾಡಿದ ಪಾತ್ರೆಗೆ ಸಮಾನ. ಸ್ವಾಧೀನ ಪಡಿಸಿಕೊಳ್ಳಬಾರದೆಂಬ ಶಿಸ್ತು ನಿಯಮದವರು ಹೇಳುವಂತೆ ಆತ್ಮದ ಹೊರತು ಬೇರೆ ಯಾವುದೂ ನಮ್ಮದಲ್ಲ. ಮೇಲೆ ಹೇಳಿರುವುದೆಲ್ಲ ಅಹಿಂಸೆಯ ವೈಶಿಷ್ಟ್ಯಂಶಗಳು.

ಕ್ರೋಧ, ಅಹಂಕಾರ, ವಂಚನೆ ಮತ್ತು ದುರಾಸೆಗಳು ಅಹಿಂಸೆಯ ಪ್ರಕಾರಗಳೇ ಆಗಿವೆ. ಈ ದುರ್ಗುಣಗಳು ಆತ್ಮಕ್ಕೆ ನೋವನ್ನುಂಟು ಮಾಡುವವು. ಆತ್ಮವನ್ನು ನೋಯಿಸುವುದೆಂದರೆ, "ಆತ್ಮ" ಹಾಗೂ "ದೇವರು" ಗಳ ಮಧ್ಯೆ ಗೋಡೆಯನ್ನು ನಿಲ್ಲಿಸಿದಂತೆ. ನಿಜವಾದ ಧರ್ಮವು ಕೆಟ್ಟ ಅನಿಷ್ಟಗಳನ್ನು ಅನುಮೋದಿಸುವವರನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಸಮಯ ಹಾಗೂ ಸ್ಥಳಗಳನ್ನು ಗಣನೆಗೆ ತೆಗೆದುಕೊಳ್ಳದ ನಿಜ ಧರ್ಮವು ಕ್ರೋದ, ಅಹಂಕಾರ, ವಂಚನೆ ಹಾಗೂ ದುರಾಸೆಗಳನ್ನು ತೊರೆದ ಜಿನೇಶ್ವರನನ್ನೇ ಗಣನೆಗೆ ತೆಗೆದುಕೊಳ್ಳುವುದು, ಹಾಗೂ ಪ್ರಾಮುಖ್ಯತೆಯನ್ನು ಕೊಡುವುದು.

TEACHINGS OF LORD MAHAVEER AND PRINCIPLES OF JAINISM

There are certain religion vows & disciplines like truthfulness, non-violence non-accceptence of things not willingly given, celibacy, righteousness. All women (except one's own wife) are regarded as mothers. Wealth belonging to others is regarded as a clod of clay. The discipline of non-possessiveness says that except for the soul nothing belongs to us. Listed above are the characteristics of non-violence.

Anger, pride, deceit and greed are forms of violence. These vices are bound to hurt the soul. Hurting one's soul is like raising a wall between "Soul" and "God". True religion cannot be propounded by

one who is subjected to the above evils. Irrespective of time and space, true religion can be propounded only by Jineshwara who is free from anger, pride,deceit and greed.

Rejection of Vedas and Brahman Supremacy, Mahaveer rejected the authority of the Vedas and objected to the Vedic rituals, sacrifices and the Brahmin supremacy.He advocated a very holy & elevating code of severe asceticim and extreme penance for the attainment of the Nirvana or the highest spiritual state. Though Mahaveer had opened the doors of his religion to all without distinction of caste, creed or sex.

Negation of God. Mahaveer did not belive that God created this world or exercised any control over it. There is no supreme creative sprit, nor any creator necessary to explain the nature of world.It is the power of nature without the intervention of any eternal deity. The diversities of the world are traced to the five co-operating condition of time, nature, necessity, activity and desire to be and act."

God,according to him,is only the highest the noblest and fullest manifestation of all the powers latent in man (the most perfect man). Man's salvation does not depend upon the mercy of God or any such person. Man is architect of his own destiny.

ಸ್ಯಾದದಾ ಅಥವಾ ಅನೇಕಾಂತ್ವದಾ

(ಬಹುಮುಖವುಳ್ಳ ಸತ್ಯ)

ನಿಜವಾದ ಧರ್ಮವು ಅವರ ಅನುಯಾಯಿಗಳ ಸಂಖ್ಯೆಯನ್ನು ಅವಲಂಬಿಸಿರುವುದಿಲ್ಲ. ಆದರೆ ಅದರ ತತ್ವಜ್ಞಾನದ ಮನೋವೈಶಾಲ್ಯತೆಯ ಮೇಲೆ ನಿಂತಿದೆ. ಜೈನ ಧರ್ಮವು ಅದರ ಜಾಗತಿಕ ದೃಷ್ಟಿಯ ವೈಶಿಷ್ಟ್ಯತೆಯಿಂದ ಜಗತ್ತಿನಲ್ಲಿ ಪ್ರಸಿದ್ಧವಾಗಿದೆ. ಗುಜರಾತಿನ ಪ್ರೊಫೆಸರ್ ಆನಂದಶಂಕರ್ ಧ್ರುವ ಹಾಗೂ ರಾಮಾನುಜನ ಶಿಕ್ಷಕರು ಇದರ ಸರ್ವಸಾಮಾನ್ಯ ತಲುಪುವಿಕೆಯನ್ನು ಪ್ರಶಂಶಿಸಿದ್ದಾರೆ. ಮಹಾನ್ ವ್ಯಕ್ತಿಗಳಾದ ಗಾಂಧೀಜಿ ಹಾಗೂ ಜಿ.ಬಿ.ಶಾರರಿಗೆ ಇದರ ಚಿಂತನೆಗಳು ಪ್ರಭಾವ ಬೀರಿದೆ. ಟ್ಯಾಗೋರ್ ಹಾಗೂ ಹಿಂದಿನ ರಾಷ್ಟ್ರಪತಿ ರಾಜೇಂದ್ರಸಿಂಗ್ ಬಾಬುರವರು ಇದನ್ನು ಜಾಗತಿಕ ಶಾಂತಿ ಹಾಗೂ ಸಾರ್ವತ್ರಿಕೆಯ ಶೋಧನೆಯ ಅದ್ವಿತೀಯವಾದುದು ಎಂದು ವರ್ಣಿಸಿದ್ದಾರೆ. ಈ ಸಾರ್ವತ್ರಿಕ ತತ್ವಜ್ಞಾನವನ್ನು "ಅನೇಕಂತ್ವದಾ" (ಸಂಬಂಧಗಳ ತರ್ಕ) ಎಂದು ಕರೆಯಲಾಗುತ್ತದೆ. ಇದರ ತತ್ವಜ್ಞಾನದ ಮಹತ್ವತೆಯನ್ನು ಒದಗಿಸಿರಿ "ಅನೇಕಂತ್ವದಾ" ಕಡೆಗೆ ಗಮನವೀಯೋಣವೇ?

ಕೇವಲ ಸೂಚಿಸುವುದರಿಂದ ಆತ್ಮವನ್ನು ಊರ್ಜಿತಾವಸ್ಥೆಗೆ ತೆಗೆದುಕೊಂಡು ಹೋಗಬಹುದೆಂದು ಅನೇಕ ಧರ್ಮಗಳು ನಂಬಿರುವವು. ಕೆಲವರು ಕೆಳಗೆ ತುಳಿಯಲ್ಪಟ್ಟವರನ್ನು ಮೇಲಕ್ಕೆತ್ತುವಂಥ ಸಮಾಜ ಸೇವೆಯನ್ನು ಧರ್ಮ ಮಾಡಬೇಕೆಂದು, ಇನ್ನು ಕೆಲವು ಪ್ರಾಯಶ್ಚಿತ್ತ, ಪಶ್ಚಾತ್ತಾಪ ಹಾಗೂ ತಪಸ್ಸಿನ ಆಚರಣೆಗೆ ಪ್ರಾಮುಖ್ಯತೆಯನ್ನು ಕೊಡುವರು. ಮೇಲಿನ ಅಂಶಗಳು ಹೇಗೆ ನ್ಯಾಯಯುತವಾಗಿರಬೇಕೆಂದರೆ ಬೇರೆಯವರ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡಿರಬೇಕು. ಆಗಲೇ ಜೈನ ಧರ್ಮವು ಅದನ್ನು

ದೃಢೀಕರಿಸುತ್ತದೆ.

ಭಕ್ತಿಯನ್ನು ನಂಬಿರುವವರು ಮುಕ್ತಕಂಠದಿಂದ ಹೇಳುವುದೆಂದರೆ ಧರ್ಮವು ಕೇವಲ ವೈರಾಗ್ಯ ಅಥವಾ ತಪಶ್ವರ್ಯ ಅಥವಾ ಸಮಾಜ ಸೇವೆಯನ್ನು ಒಳಗೊಂಡಿಲ್ಲ. ತಪಶ್ವರ್ಯವನ್ನು ನಂಬಿರುವವರು ಸೇವೆಯೆನ್ನುವುದು ಅರ್ಥಹೀನ, ಆದರೆ ತಪಶ್ವರ್ಯವೊಂದೇ ಧರ್ಮವು ಎಂದು; ಆದರೆ "ಅನೇಕಂತ್ವಾದಾ" ವನ್ನು ನಂಬಿರುವವರು, ಮೇಲೆ ಹೇಳಿರುವ ಎಲ್ಲಾ ಅಂಶಗಳು ನಿಜವಾದವು. ಇದುವೇ ಜೈನ ಧರ್ಮದ ಅವಶ್ಯಕತೆಗಳು ಎಂದು ಹೇಳಲಾಗುತ್ತದೆ.

"ಪರ್ಯುಸಾನ" ಉತ್ಸವದ ಸಮಯದಲ್ಲಿ ಜೈನರು ತಪಶ್ವರ್ಯ ಮಾಡುವವರಿಗೆ ಆಶ್ರಯವನ್ನು ನೀಡುವರು. ಒಬ್ಬ ಚಿಕ್ಕ ಬಾಲಕನು ಕೂಡ ಉಪವಾಸ ಆಚರಿಸುತ್ತಿರುವುದನ್ನು ಕಾಣಬಹುದು. ಈ ಉಪವಾಸವು ಕೇವಲ ಆಹಾರ ಸೇವಿಸುವುದರಿಂದ ನಿಷಿದ್ಧವಲ್ಲದೆ ಕೆಲವು ಸಮಯ ಜಲಪಾನ ಮಾಡಲು ನಿಷಿದ್ಧವಿರುತ್ತದೆ. ಕೇವಲ ಹಣ್ಣುಗಳನ್ನು ತಿನ್ನುವುದೂ ಕೂಡ ಇಲ್ಲಿ ಸಲ್ಲದು. ಈ ಉತ್ಸವಗಳಲ್ಲಿ ಜೈನರು ಕೇವಲ ಉಪವಾಸಗೈಯ್ಯುವುದಲ್ಲದೆ ಅನಾಥರಿಗೆ ದಾನ ಸಲ್ಲಿಸುವುದಲ್ಲದೆ ಗೋಶಾಲೆಗಳಿಗೆ ಹಾಗೂ ಮೂಕ ಪ್ರಾಣಿಗಳ ವಸತಿಗೆ ಧನ ಸಹಾಯ ಮಾಡುವರು. ಇಲ್ಲಿ "ಅನೇಕತ್ವದಾ" ಜೀವಿತವಾಗಿರುವುದನ್ನು ಕಾಣಬಹುದು.

ಆಹಾರವನ್ನು ತ್ಯಜಿಸಿ ಉಪವಾಸ ಮಾಡುವುದು ದೊಡ್ಡ ಮಾತಲ್ಲದಿದ್ದರೂ ಬರಿಹೊಟ್ಟೆಯಲ್ಲಿರುವ ಅನಾಥರಿಗೆ ಅನ್ನದಾನ ಮಾಡುವುದು ಶ್ರೇಷ್ಠ ಕಾರ್ಯವು. ಕೆಲವೊಮ್ಮೆ ತಾನು ಉಪವಾಸ ವ್ರತದಲ್ಲಿದ್ದು ಹಸಿದವರಿಗೆ ಅನ್ನದಾನ ಮಾಡುವುದೂ ಉಂಟು. ಇದು ವಿರೋಧಾಭಾಸವೆನಿಸುತ್ತದಯೇ? ಇಲ್ಲಿ, ಸಾರ್ವತ್ರಿಕ ದೃಷ್ಟಿಯುಳ್ಳವನಿಗೆ ಇದು

ವಿರೋಧಾಭಾಸವೆನಿಸುವುದೇ ಇಲ್ಲ.

ಈ ರೀತಿಯ ವ್ರತವನ್ನು ಸಾರ್ವಜನಿಕರು ಸ್ವೀಕರಿಸುವುದರಿಂದ ಭಾರತದ ಆಹಾರ ಸಮಸ್ಯೆಯು ಎಷ್ಟೋ ಮಟ್ಟಿಗೆ ನೀಗಬಲ್ಲದು ಎಂಬುದನ್ನು ಜೈನಧರ್ಮದ ಈ ಅಂಶಗಳನ್ನು ಅರಿತ ಎಷ್ಟೋ ಚಿಂತನಕಾರಾರು ಹಾಗೂ ನಾಯಕರುಗಳು ಅಭಿಪ್ರಾಯ ಪಟ್ಟಿರುವರು. ಇನ್ನೊಂದು ನೆನಪಿರಿಸಬೇಕಾದ ವಿಷಯವೆಂದರೆ ಈ ತಪಶ್ವರ್ಯವನ್ನು ಕೈಗೊಳ್ಳುವವರು ಅನ್ಯರಿಗೆ ಸರ್ವಥಾ ನೋವುಂಟು ಮಾಡುವುದಿಲ್ಲ. ಇಂಥಹ ವ್ಯಕ್ತಿ 30, 40, 50 ದಿನಗಳವರೆಗೆ ಉಪವಾಸ ಕೈಗೊಂಡರೂ ಬೇರೆಯವರ ಬಗ್ಗೆಯೂ ಕಾಳಜಿವಹಿಸುವುದನ್ನು ಮರೆಯುವುದಿಲ್ಲ.

ಹಿಂದೆ ಭಾರತದ ಮೇಲೆ ದಾಳಿ ಇತ್ತ ಸೈನ್ಯವು, ಜೈನ ಸಮುದಾಯಗಳು ಕೂಡಿಟ್ಟ ಅಮೂಲ್ಯ ಧಾರ್ಮಿಕ ಪುಸ್ತಕಗಳನ್ನು ಗ್ರಂಥಾಲಯಗಳಿಂದ ಎತ್ತಿ ತಮಗೆ ಸ್ನಾನ ಮಾಡಲು ನೀರನ್ನು ಕಾಯಿಸಲು ಅದನ್ನು ಉರಿಸಲು ಉಪಯೋಗಿಸಿಕೊಂಡಿದ್ದರು. ಆದರೂ ಕೂಡ ಜೈನರು ಎಲ್ಲಾ ಧರ್ಮದ ಗ್ರಂಥಗಳನ್ನು ಸುರಕ್ಷಿತವಾಗಿ ಕಾಪಾಡಿರುವರು. ಇದು ಅವರ "ಸ್ಯಾದ್ವದಾ" ದ ಪರಿಣಾಮವೆಂದೇ ಹೇಳಬೇಕು. ಇದೇ ಕಾರಣದಿಂದ ಬೇರೆ ಧರ್ಮದ ತತ್ವಜ್ಞಾನದ ಪುಸ್ತಕಗಳನ್ನೂ ಇವರ ಗ್ರಂಥಾಲಯಗಳಲ್ಲಿ ಸಂಗ್ರಹಿಸಿ ಕಾಪಾಡಿಕೊಂಡಿರುವುದಕ್ಕೆ ಕಾರಣ. (ಕೆ.ಕೆ.ಶಾಸ್ತ್ರಿ)

ಅನ್ಯಧರ್ಮದ ಸಾಹಿತ್ಯಗಳನ್ನು ನಿರ್ಲಕ್ಷಿಸಬೇಡ, ಅವಹೇಳನ ಮಾಡಬೇಡವೆಂದೇ ಜೈನರು ತಮ್ಮ ಮಕ್ಕಳಿಗೆ ಹೇಳುವುದು. ಅದಕ್ಕೋಸ್ಕರ ಮಕ್ಕಳು ಬರಿಕಾಗದದ ಮೇಲೆ ಪಾದವನಿರಿಸಲೂ ಹಿಂಜರಿಯುವರು. ಈ ಒಳ್ಳೆಯ ಹವ್ಯಾಸಗಳಿಂದಲೇ ಜೈನ ಸಾಹಿತ್ಯದಲ್ಲಿ ಅನ್ಯ ಧರ್ಮಗಳ ತತ್ವಜ್ಞಾನವನ್ನು ನಾವು ಕಂಡುಕೊಳ್ಳಬಹುದು. ಇಂಥ ಕೋನ ಹಾಗೂ

ದೃಷ್ಟಿಗಳಿಂದಲೇ ಬೇರೆ ಧರ್ಮದ ತತ್ವಗಳು ಎಷ್ಟೋಮಟ್ಟಿಗೆ ಸಮರ್ಪಕವಾಗಿವೆ ಎಂಬುದನ್ನು ಸವಿಸ್ತಾರವಾಗಿ ವಿವರಿಸಲಾಗಿದೆ.

ಜೈನ ಸಾಹಿತ್ಯದಷ್ಟೇ ಕಾಳಜಿಯಿಂದ ಉಳಿದ ಧರ್ಮದ ಪುಸ್ತಕಗಳಾದ ಕುರಾನ್, ಕ್ರಿಪಿಟಕ್, ಬೈಬಲ್, ವೇದ ಹಾಗೂ ಪುರಾಣಗಳನ್ನು ಕಾಯ್ದಿರಿಸಿರುವರು. ಜೈನ ಧರ್ಮದವರು ಅಲ್ಲದವರು ಬರೆದಿರುವ (ಅದರಲ್ಲಿ ಜೈನ ತತ್ವಜ್ಞಾನವನ್ನು ವಿಮರ್ಶಿಸಿರುವವು. ಆಕ್ಷೇಪಿಸಿರುವಂತಹವು ಇವೆ) ಕೃತಿಗಳನ್ನು ಜೋಪಾನವಾಗಿ ಜೈನ ಗ್ರಂಥಾಲಯಗಳಲ್ಲಿ ಕಾಯ್ದಿರಿಸಲಾಗಿದೆ. ಸ್ಯಾದ್ವದಾದ ಪರಿಣಾಮವಾಗಿ ಜೈನ ವಿದ್ವಾಂಸರು ಹಾಗೂ ಆಚಾರ್ಯರು ಹೀಗೆ ತಮ್ಮ ತತ್ವಜ್ಞಾನವನ್ನು ಆಕ್ಷೇಪಿಸಿದ ಕೃತಿಗಳಿಗೆ ಅಧಿಕಾರಯುತವಾಗಿ ವಿವರಣೆ ಬರೆದು ಕೊಟ್ಟಿರುವರು. ಜೈನ ವಿದ್ವಾಂಸರು ತಮ್ಮ ಸಾಹಿತ್ಯ ಹಾಗೂ ಸಂಪ್ರದಾಯಗಳಿಗೆ ಆಧಾರವಾಗಿ ಪುರಾಣ ಹಾಗೂ ಮಹಾಭಾರತದ ಅಂಶಗಳನ್ನೂ ಉದಾಹರಣೆಯಾಗಿ ಆಯ್ದುಕೊಂಡಿರುವರು.

ಯಾವುದೇ ವಸ್ತುವನ್ನು ಅಥವಾ ವಿಷಯವನ್ನು ಒಂದೇ ಕೋನ ಅಥವಾ ಒಂದೇ ದೃಷ್ಟಿಯಿಂದ ನೋಡುವುದು ತಪ್ಪು ಎಂದು ಜೈನ ಧರ್ಮ ಗ್ರಂಥಗಳು ಸಾರುವವು. ಆ ವಸ್ತುವೂ ಹಾಗೂ ಇರಬಹುದು ಹೀಗೂ ಇರಬಹುದು. ಇಂತಹ ಮಹಾನ್ ಅನೇಕಂತ್ವದಾದ ಬೋಧನೆಗಳನ್ನು ಜೈನ ಆಗಮ ನಂದಿ ಸೂತ್ರದಲ್ಲಿ ಅಳವಡಿಸಲಾಗಿದೆ. ಇಂಥ ಉದಾರವಾದ ಮುಕ್ತ ಅಭಿಪ್ರಾಯಗಳನ್ನು ಬೇರೆ ಯಾವ ಧಾರ್ಮಿಕ ಶಾಸ್ತ್ರಗಳ ಗ್ರಂಥಗಳಲ್ಲಿ ಪ್ರಕಟಪಡಿಸಿರುವುದಿಲ್ಲ. ನಂದಿಸೂತ್ರದಲ್ಲಿ ಉಲ್ಲೇಖಿಸಿದಂತೆ ಧಾರ್ಮಿಕ ಗ್ರಂಥಗಳಾದ ಮಹಾಭಾರತ ಅಥವಾ ಪುರಾಣಗಳನ್ನು ಸರಿಯಾಗಿ ಓದಿ ತಿಳಿದುಕೊಂಡರೆ, ಅವುಗಳಲ್ಲಿ ತಪ್ಪೇನೂ ಇಲ್ಲ. ಜೈನ ಧಾರ್ಮಿಕ ಗ್ರಂಥಗಳನ್ನು ಕೂಡ ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳದಿದ್ದರೆ, ಅದೂ ಕೂಡ ತಪ್ಪಾಗಿ

ತೋರಬಹುದು. ವಾಸ್ತವಿಕವಾಗಿ ಹೇಳಬೇಕೆಂದರೆ ಜೈನ ತತ್ವಜ್ಞಾನದಲ್ಲಿ ವಿವರಿಸಿರುವಂತೆ ಅನ್ಯಧರ್ಮಗಳ ತತ್ವಜ್ಞಾನದಲ್ಲಿ ವಿಭಿನ್ನ ದೃಷ್ಟಿಗಳು ಕಂಡು ಬಂದಿದ್ದರೂ ಅವು ತಪ್ಪಲ್ಲ. ಪ್ರತಿಯೊಬ್ಬರು ಸಮರ್ಪಕವಾದ ದೃಷ್ಟಿಯನ್ನು ಮನದಲ್ಲಿರಿಸಿಕೊಂಡು ಅರ್ಥ ಮಾಡಿಕೊಂಡರೆ ಏನೂ ತೊಡಕುಗಳಿರದು, ಆದರೆ ಒಂದೇ ದೃಷ್ಟಿಯಲ್ಲಿ ಸಾಗಕೂಡದು. ಒಬ್ಬನ ದೃಷ್ಟಿಯು ಭಿನ್ನವಾಗಿದ್ದರೆ, ಒಬ್ಬನು ಅಸತ್ಯವಾದುದನ್ನು ಕಾಣುವಂತೆ ಮಾಡಲಾರ ಎಂದು ಅರ್ಥವಲ್ಲ.

ಪ್ರಾಚೀನ ಕಾಲದಲ್ಲಿ ಜೈನ ಮಂದಿರಗಳ ಮೇಲೆ ದಾಳಿ ಮಾಡಲಾಯಿತೆನ್ನುವುದು ನಿಜ. 2000 ಕ್ಕಿಂತ ಹೆಚ್ಚು ಜೈನ ಮುನಿಗಳನ್ನು ಸಾಯಿಸಲಾಯಿತು. ಆದರೂ ಜೈನರು ಅನ್ಯಧರ್ಮದ ವಿಗ್ರಹಗಳನ್ನು ಒಡೆಯಲಿಲ್ಲ, ನಾಶಪಡಿಸಲಿಲ್ಲ. ಅದಕ್ಕೆ ಬದಲಾಗಿ ಅವುಗಳನ್ನು ರಕ್ಷಿಸಿದರು, ಘೋಷಿಸಿದರು.

ಮಾನವ ಪ್ರೇಮವುಳ್ಳ ಜೈನ ಜಗದೂಷಾ ಅವರು ಮಸೀದಿಗಳನ್ನು ಕಟ್ಟಿಸಿದರು. ತಾಳ್ಮೆ ಹಾಗೂ ಉದಾರತೆಯಿಂದ ಬೇರೆ ಧರ್ಮವನ್ನು ನಾವು ಆಹ್ವಾನಿಸಬೇಕು ಹೊರತು ಅವುಗಳನ್ನು ದ್ವೇಷಿಸುವುದಿಲ್ಲ. ಜೈನ ಧರ್ಮವು ತನ್ನನ್ನು ತಾನು ತ್ಯಾಗ ಮಾಡುವುದನ್ನು ಕಲಿಸಿ ಕೊಡುತ್ತದೆ. ಕೆಲವೊಮ್ಮೆ ಒಂದು ವಸ್ತುವಿನ ಅಪ್ಪಟತನಕ್ಕಾಗಿ ಹೊಗಳಬೇಕಾಗುತ್ತದೆ. ದ್ವೇಷವನ್ನು ತೀರಿಸಿಕೊಳ್ಳಲು ದ್ವೇಷದಿಂದಲೇ ಸಾಧಿಸಬೇಕಾಗಿಲ್ಲ ಅದನ್ನು ಪ್ರೀತಿಯಿಂದ ಹೋಗಲಾಡಿಸಬಹುದು. ಇದು "ಅನೇಕಂತ್ವದಾ" ಅಥವಾ ಅಹಿಂಸೆಯ ಸರಿಯಾದ ತತ್ವವು.

ಪಾಪಿ ಹಾಗೂ ಪಾಪ ಎರಡೂ ಭಿನ್ನವಾದವುಗಳು ಎಂಬುದನ್ನು ಮರೆಯಬಾರದು. ಆದರೆ ಕೆಲವೊಮ್ಮೆ ಅವೆರಡೂ ಒಂದೇ ಎಂದು ಕೂಡ

ಪರಿಗಣಿಸಬೇಕಾಗುತ್ತದೆ. ಯಾಕೆಂದರೆ ಅವೆರಡೂ ಒಂದೇ ನಾಣ್ಯದ ಎರಡು ಮುಖಗಳು. ಹೊರ ನೋಟಕ್ಕೆ ಇದು ಅಸಂಬದ್ಧವೆನ್ನಿಸಬಹುದು. 'ಸ್ಯಾದ್ವದಾ' ಮೂಲಕ ಇದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದು. ಯಾರಾದರೂ ಪಾಪಿಯನ್ನು ಕಂಡಾಗ ಪಾಪಿ ಹಾಗೂ ಪಾಪ ಎರಡೂ ಭಿನ್ನವಾದವುಗಳು ಎಂಬುದನ್ನು ಮರೆಯಕೂಡದು. ಆದ್ದರಿಂದ ಪಾಪಿಯನ್ನು ಕೊಲ್ಲುವುದರಿಂದ ಏನೂ ಪ್ರಯೋಜನವಿಲ್ಲ. ಒಂದು ವೇಳೆ ಒಬ್ಬನು ಒಂದು ಪಾಪದ ಕೃತ್ಯ ಮಾಡಬೇಕಾಗಿ ಬಂದಾಗ ಆತನು ಪಾಪ ಹಾಗೂ ಪಾಪಗೈಯುವವನು ಎರಡೂ ಒಂದೇ ಎಂಬುದನ್ನು ಮನಗಾಣಲೇಬೇಕು. ಇಂಥಹ ಸಂದರ್ಭದಲ್ಲಿ ಆತ್ಮ ಹಾಗೂ ಪಾಪ ಎನ್ನುವುದು ಎರಡು ಭಿನ್ನವಾದವುಗಳು ಎಂದು ಅಂದುಕೊಂಡು ಅಸಹಾಯಕನೆಂದು ಅಂದುಕೊಳ್ಳಕೂಡದು ಹಾಗೂ ಅದು ಆತನ ಹಿಂದಿನ ಜನ್ಮದ ಕರ್ಮ, ಅದಕ್ಕೋಸ್ಕರವೇ ಅವನು ಈ ಪಾಪಕೃತ್ಯವನ್ನು ಎಸಗಲು ಒತ್ತಾಯಿಸುತ್ತಿವೆ ಎಂದು ಹೇಳುವುದು. ಇದೆಲ್ಲಾ ಸ್ಯಾದ್ವದಾಗೆ ಸಂಬಂಧಿಸಿದುದಲ್ಲ.

ಜೈನ ಸನ್ಯಾಸಿಗಳು ಹಿಂಜರಿಯದೆ ಮುಸ್ಲಿಮ್, ಹಿಂದೂ ಹಾಗೂ ಜೈನ ರಾಜರಿಗೆ ಧರ್ಮ ಬೋಧನೆಗಳನ್ನು ಮಾಡಿರುವರು. ಅವರು ಜೈನ ಧರ್ಮವನ್ನು ಹೊಗಳಿದರು. ಆದರೆ ಜೈನ ಅಲ್ಲದವರನ್ನು ಬೆದರಿಸಲಿಲ್ಲ ಅಥವಾ ಮತಾಂತರಗೊಳ್ಳಲು ಒತ್ತಾಯಿಸಲಿಲ್ಲ.

ಕಲಿಕಾಲ ಸರ್ವಜ್ಞ ಆಚಾರ್ಯ ಹೇಮಚಂದ್ರ ಸುರೀಶ್ವರಜಿ ಹಾಗೂ ಆಚಾರ್ಯ ಹೀರ್ ಸುರೀಶ್ವರಜಿಯವರು ರಾಜರುಗಳ ಸಹಾಯದ ಮೂಲಕ ಧರ್ಮಪ್ರಚಾರ ಕೈಗೊಂಡಿದ್ದರು. ಅವರು ಯಾವುದೇ ಮಸೀದಿ ಅಥವಾ ಹಿಂದೂ ದೇಗಲುಗಳನ್ನು ನಾಶಪಡಿಸಲು ರಾಜನನ್ನು ಒತ್ತಾಯಿಸಲಿಲ್ಲ. ಹೀಗೆ ಈ ಜೈನ ಧರ್ಮದ ಸಿದ್ಧಾಂತಗಳು ನಿಶ್ಚಿತವಾದವುಗಳಾಗಿದ್ದವು. ಜೈನ ಹಾಗೂ

ಅನ್ಯ ಧರ್ಮಗಳನ್ನು ವಿಚಾರಗಳನ್ನು ಹೋಲಿಸಿ ನೋಡಿದಾಗ, ಅದರ ಮನೋವೈಶಾಲ್ಯತೆ ಹಾಗೂ ವಿಮೋಚನೆಯ ಅಂದಾಜು ಹತ್ತುವುದು. ಕೆಳಗಿರುವ ಕೆಲವು ತತ್ವಗಳು ಅದನ್ನು ಪುಷ್ಟೀಕರಿಸುತ್ತವೆ.

(1) ಯಾರಾದರೂ ವಿಮೋಚನೆ ಅಥವಾ ಮೋಕ್ಷವನ್ನು ಪಡೆಯ ಬಯಸಿದರೆ ಭವಿಷ್ಯದಲ್ಲಿ ಆದಷ್ಟು ಬೇಗ ಅದನ್ನು ಪಡೆಯಬಹುದು.

(2) ಅದು ಕಾರ್ಯಗೂಡಬೇಕಾದರೆ ಆತನು ಜೈನ ಆಗಿರಬೇಕು.

(3) ಹೊರಗಿನಿಂದ ಜೈನ ಧರ್ಮವನ್ನು ವಿರೋಧಿಸಿದರೂ ಆತನು ಪ್ರಾಮಾಣಿಕನಾಗಿದ್ದರೆ ಕಡೆಯಲ್ಲಿ ಮೋಕ್ಷವನ್ನು ಪಡೆಯುವನು.

(4) ಅಂತಿಮವಾಗಿ ವಿಮೋಚನೆಗೊಳ್ಳಬೇಕಾದರೆ ಆತನು ಜೈನ ಕುಲದಲ್ಲೇ ಜನಿಸಿದವನಾಗಿರಲೇಬೇಕೆಂದು ಏನೂ ಇಲ್ಲ.

(5) ಜನ್ಮತಃ ಆತನು ಜನ್ಮಧರ್ಮ ವಿರೋಧಿಯಾಗಿರಬಹುದಾದರೂ ಮೋಕ್ಷವನ್ನು ಪಡೆಯಲು ಆತನಿಗೆ ತಡೆಯಾಗಲಾರದು, ಒಂದುವೇಳೆ ಇದೇ ಜನ್ಮದಲ್ಲಿ ಆತನು ತನ್ನ ನಡವಳಿಕೆಯನ್ನು ಬದಲಿಸಬಲ್ಲವನಾಗಿದ್ದರೆ.

(6) ಜೈನಧರ್ಮವು ಕೇವಲ ಅದರ ಅನುಯಾಯಿಗಳನ್ನಷ್ಟೇ ಸ್ವರ್ಗಕ್ಕೆ ಕರೆದೊಯ್ಯುತ್ತದೆ. ಉಳಿದವರನ್ನು ನರಕಕ್ಕೆ ಎಂದೇನೂ ಹೇಳುವುದಿಲ್ಲ.

(7) ಜೈನ ತಂದೆ-ತಾಯಿಗಳಿಗೆ ಜನಿಸಿಯೂ ಆತನು ದುರ್ನಡತೆಯಿಂದ ಕೂಡಿದ್ದರೆ ಹಾಗೂ ಜೈನಧರ್ಮದ ಬಗ್ಗೆ ತಿಳುವಳಿಕೆ ಇಲ್ಲದವನಾಗಿದ್ದರೂ, ಒಳ್ಳೆಯ ನಡತೆಯುಳ್ಳವನಾಗಿದ್ದರೆ ಆತನು ಸ್ವರ್ಗವನ್ನು ಪಡೆಯುವುದರಿಂದ ತಡೆಯಲಾಗದು.

(8) ಯಾರೇ ಆಗಲಿ ಮೋಹ ಹಾಗೂ ದ್ವೇಷಗಳನ್ನು ಮೀರಿದ ಚರಿತ್ರೆಯವರಾಗಿದ್ದರೆ, ಅವನು "ಜಿನ" ಹಾಗೂ ಅವನು ಆಯ್ದುಕೊಂಡದ್ದು ಜೈನಧರ್ಮವೆಂದು ಹೇಳಬಹುದು.

ಅನೇಕ ಹಳ್ಳಗಳು ನದಿಯನ್ನು ಸೇರಿಕೊಂಡಂತೆ ಹಾಗೂ ನದಿಯು ಸಾಗರವನ್ನು ಸೇರಿದಂತೆ, ಎಲ್ಲರೂ ವಿಮೋಚನೆ ಹಾಗೂ ಮೋಕ್ಷವನ್ನು "ವಿತರಣಾ" ಮಾರ್ಗದ ಮೂಲಕ ಪಡೆಯುವರು, ಆ ಮಾರ್ಗವು ನದಿಯದಾಗಿದ್ದು ಮೋಕ್ಷವೆಂಬ ಸಾಗರವನ್ನು ಸೇರುತ್ತದೆ. ಇದರ ಪರಿಣಾಮವಾಗಿ ಜೈನ ಧರ್ಮವು ಪರಮತ್ ವೈರದಿಂದ ದೂರವಿದೆ. ಹಾಗೂ ಜೈನ ಧರ್ಮವು ಉಳಿದ ಧರ್ಮಗಳ ವಿರುದ್ಧ ದಬ್ಬಾಳಿಕೆಯನ್ನು ಮಾಡುವುದನ್ನು ಪ್ರೋತ್ಸಾಹಿಸುವುದಿಲ್ಲ.

ಎಲ್ಲಕ್ಕೂ ಮುಖ್ಯವಾಗಿ ಪ್ರತಿಯೊಬ್ಬ ಜೈನ ತನ್ನ ಸಾಮರ್ಥ್ಯಕ್ಕೂ ಮಿಗಿಲಾಗಿ ಜೈನ ತತ್ವಗಳನ್ನು ಪ್ರಾಮಾಣಿಕವಾಗಿ ಅನುಸರಿಸಬೇಕು. ಜೈನ ಅಲ್ಲದ ಇತರರಿಗೆ ಪ್ರೀತಿ ಹಾಗೂ ಅನುಭೂತಿಯಿಂದ ಜೈನಧರ್ಮದ ಸಿದ್ಧಾಂತಗಳನ್ನು ವಿವರಿಸಬೇಕು. ಬೇರೆಯವರ ತತ್ವಗಳು ತಪ್ಪು ಎಂದು ಹೇಳಕೂಡದು, ಆದರೆ ನಿಧಾನವಾಗಿ ಅವರ ನಂಬಿಕೆಗಳಲ್ಲಿ ಬದಲಾವಣೆ ತರುವಂತೆ ತಿಳಿ ಹೇಳಬೇಕು. ಅವರಲ್ಲಿರುವ ನಂಬಿಕೆಗಳು ಮೌಲ್ಯಯುತವಾಗಿದ್ದರೆ ಅದನ್ನು ಸ್ವೀಕರಿಸಬೇಕು. ಆಗ ನಿಮ್ಮ ವಿಚಾರಗಳು ಅವರಿಗೆ ನ್ಯಾಯಸಮ್ಮತವೆನ್ನಿಸಬಹುದು. ಇದು "ಸ್ಯಾದ್ವದಾ" ದ ಸಂದೇಶ.

ಒಂದೇ ಕಣ್ಣು ಇರುವ ವ್ಯಕ್ತಿಗೆ "ಒಕ್ಕಣ್ಣ" ಎಂದು ಕರೆಯುವುದಕ್ಕಿಂತ ಒಂದು ವಸ್ತುವನ್ನು ಎರಡೂ ಕಣ್ಣುಗಳಿಂದ ನೋಡುವುದರಿಂದ ವಿಸ್ತಾರವಾಗಿ ಕಾಣಬಲ್ಲದು ಎಂದು ಹೇಳಬಹುದು. ಇದೇ "ಸ್ಯಾದ್ವದಾ" ದ ತಿರುಳು. ಇಂತಹ ನಿಲುವು ಇರುವುದರಿಂದಲೇ ವಿಶ್ವದ ಎಲ್ಲಾ ಧರ್ಮಗಳು ಜೈನ ಸಿದ್ಧಾಂತಗಳನ್ನು

ಒಪ್ಪಿಕೊಳ್ಳಲು ಕಾರಣ ಎಂದು ಹೇಳಬಹುದು.

ಜೈನಧರ್ಮದ ಅನುಯಾಯಿಗಳು ಕನಿಷ್ಠವೆಂದರೂ ಆಶ್ಚರ್ಯವೇನಲ್ಲ. ಇದಕ್ಕೆ ಕಾರಣ ವೈರಾಗ್ಯ ಹಾಗೂ ತಪಶ್ಚರ್ಯಗಳನ್ನು ಅನುಸರಿಸುವುದು. ಈ ವಿಷಯದ ಬಗ್ಗೆ ವಿನೋಬಭಾವೆಯವರ ನುಡಿಗಳನ್ನು ಜ್ಞಾಪಿಸಿಕೊಳ್ಳುವುದು ಸೂಕ್ತವೆನಿಸುತ್ತದೆ. "ಜೈನ ಧರ್ಮವು ತನ್ನ ಸಂಖ್ಯೆಯನ್ನು ಹೆಚ್ಚಿಸಲು ಉತ್ಸುಕವಾಗಿಲ್ಲ. ಜನರು ಕೇಳುವರು ಜೈನ ಸಂಖ್ಯೆ ಏಕೆ ಕಡಿಮೆ ಇದೆಯೆಂದು, ಅದಕ್ಕೆ ನಾನು ಉತ್ತರಿಸುವುದು ಏನೆಂದರೆ ಕಡಿಮೆ ಸಂಖ್ಯೆಯು ಜಾಣರ ಲಕ್ಷಣವು. ಸಕ್ಕರೆಯು ಸಹಿಯಾಗಿರುತ್ತದೆ. ಅದನ್ನು ಹಾಲಿನೊಂದಿಗೆ ಬರೆಸಿದಾಗ ಅದರ ಸಿಹಿಯು ಸಂಪೂರ್ಣವಾಗಿ ಹರಡುವುದು. ಸಕ್ಕರೆಯ ಬೆರೆತ ಮೇಲೇ ಜನರು ಹಾಲು ಸಿಹಿಯಾಗಿದೆ ಎಂದು ಹೇಳುವರು, ಆದರೆ ವಾಸ್ತವದಲ್ಲಿ ಆ ಸಕ್ಕರೆಯು ಸಿಹಿಯು ಮುಖ್ಯ ಅದರಂತೆ ಜೈನರು ಪ್ರಪಂಚದ ಜನರಲ್ಲಿ ಅಕ್ಕರೆಯಿಂದ ಕೂಡಿಕೊಂಡಿರುವುದು, ಅದರಿಂದ ಸಿಹಿಯ ಮಾಧುರ್ಯವನ್ನು ಜನರಲ್ಲಿ ಹೆಚ್ಚಿಸಿದೆ".

"ಮಹಾರಾಷ್ಟ್ರದಲ್ಲಿ ಮಕ್ಕಳಿಗೆ "ಶ್ರೀ ಗಣೇಶಾಯ ನಮಃ" ಎಂದು ಕಲಿಸಿಕೊಡಲಾಗುತ್ತದೆ. ಏಕೆ ಅಲ್ಲಿ ಶಿಕ್ಷಕರು ಜೈನ, ಆದರೆ ವಿದ್ಯಾರ್ಥಿಗಳು ಜೈನ ಅಲ್ಲ. ಅದರಂತೆ ಮುಂದಿನ ಪಾಠವು "ಓಂ ನಮೋ ಸಿದ್ಧಾಮ್" ಎಂದು ಪ್ರಾರಂಭವಾಗುತ್ತದೆ. ಈ ಪದ್ಧತಿಯು ಅಲ್ಲಿ ಇಂದಿಗೂ ಜಾರಿಯಲ್ಲಿದೆ. ಜೈನ ಧರ್ಮದವರ ಸಂಖ್ಯೆ ತುಂಬಾ ಕಡಿಮೆಯಿದ್ದರೂ ಬೇರೆಯವರೊಡನೆ ಬೆರೆತು ಅಕ್ಕರತೆಯಿಂದ ಇದ್ದಾರೆ. ಕೇವಲ ಸಂಖ್ಯೆಯೆಯನ್ನು ವರ್ಧಿಸುವುದು ಚಿಕ್ಕ ವಿಷಯ".

ವಿನೋಬ ಭಾವೆ, ಜೈನ್‌ಭಾರತಿ, ವರ್ಷ 15, ಅಧ್ಯಾಯ 16

PHILOSOPHY OF KARMA

In more or less extent,each and every philosophical school has tried to discuss the Karma philosophy and all except the Jain system do not regard Karma as atom. But the Jain doctrines define Karma in terms of subtlest particles of matter spread throughout the Cosmic Sphere. These particles have entangled all the souls from beginningless time in bondage in the same way gold particles are mixed up with the earth.

Every particle of Karma is mixed with the soul from various causes such as wrong faith or Mithyatva a state of vowlessness or Avirati the feelings of good and bad, egoism, mineess or Kashaya, and all bodily, verble and mental activities called the Yoga.These particles of Karma are accumulated around the soul like a cover and in consequence, it is subjected to birth and death, happiness and misery in Various forms of life.

To get rid of these particles for the attainment of freedom from all the sufferings, one must develop Right faith, Right knowledge and Right conduct. These three essentials should be developed to the highest extent and with their combined help, the entangled Soul will be

able to slacken its entire accumulated particles of Karmas & became free for ever from bondage. The Karma philosophy in Jainism has laid great emphasis on one particular point that man must not blindly depend upon his past Karma and blame it for all his miseries putting aside his endeavour and incessant labours for reaping the blessings of life. At the same time man must not depend blindly on his own endeavour and hard work for his happiness ignoring the power of Karma for moulding his destiny. Karma exerts dominating influence on the life of man,but he should not turn himself dejected by his disappointments and disheartening setbacks in life, his miseries and sufferings, putting the entire responsibility for his plight to the result of his previous Karma. On the contrary, he should ignore his sufferings, maintain equanimity and exert himself in his labours to uproot the main cause of misery. According to Jain philosophy the effects of bad karma can be counteracted by rendering meritorious deeds and all the influx of the eight types of karmas arrested by observing austerities. The elemination of Karmas leads a person to liberation. Jaina philosophy declares that all past karmas can be eliminated and also all future karmas prevented by observing the rules of conduct to liberate the entangled soul from bondage.

STUDY OF JAINISM

About five decades ago, scholars were not so well acquainted with Jain literature and it's doctrines. Because of their partial ignorance or half-knowledge,they have interpreted Jain concepts in wrong view-point. But in recent times, many scholars have admitted these mistakes, Some of these misconceptions were;

1. that Jainism is an offshoot of the vedic religion or Buddhism,
2. that Jainas are atheists,
3. that the philosophy of syadvada is shallow and fruitless,
4. that suicide is permitted in fulfillment of religious vows,
5. that Lord Mahaveer ate meat and
6. that fasts are inflictment of violence on the body

But these wrong notions have been corrected and scholars have admitted that Jainism is the foremost religion in the history of mankind that the jains are not atheist , but staunch belivers in God provided that they do not belive in a supreme God as creator of the world and that Syadvada is not an aimless philosophy, but the noblest and strongest concept covering the entire human activities and that suicide is not permissable but treated as a great sin and only in extreme old age, a Jain can give up food under the guidance of his preceptor and that Mahaveer was a unique preacher of non-violence and could never take meat. Dharmananda Kosambi, the Buddhist scholar has interpreted the word 'Kravoye' as meat, but its right meaning is a kind of vegetable used as a medicine.

We hope that impartial persons , intrested in the study of jainalogy, will realise its true concepts and understand the philosophy and message of this most ancient religion in the history of the world.

ಜೈನ ಧರ್ಮದ ಪ್ರಾಚೀನತೆ

ಭಾರತವು ತನ್ನ ಪ್ರಾಚೀನ ಸಂಸ್ಕೃತಿ ಹಾಗೂ ನಾಗರಿಕತೆಗೆ ಹೆಸರುವಾಸಿ, ಸನ್ಯಾಸಿಗಳು ಹಾಗೂ ದಿವ್ಯಜ್ಞಾನಿಗಳು ಇದ್ದರು. ಅವರಿಗೆ ಭೂತಕಾಲದ, ವರ್ತಮಾನ ಹಾಗೂ ಭವಿಷ್ಯದ ಜ್ಞಾನ ಇತ್ತು. ಅದರಿಂದ ಸ್ವಾಭಾವಿಕವಾಗಿ ಭಾರತೀಯರೆ "ಓಲ್ಡ್ ಈಸ್ ಗೋಲ್ಡ್" (ಹಳೆಯದು ಅಮೂಲ್ಯವಾದುದು) ಎಂದು ಭಾವಿಸುವರು.

ವಿಶ್ವದಷ್ಟೇ ಹಳೆಯದು ಈ ಜೈನಧರ್ಮವು, ಇದನ್ನು ಜೈನ್‌ರಲ್ಲದ ವಿದ್ವಾಂಸರೂ ಕೂಡ ಒಪ್ಪಿಕೊಂಡಿದ್ದಾರೆ. ವೈಜ್ಞಾನಿಕವಾಗಿ ಇಷ್ಟೊಂದು ಮುಂದುವರಿದಿದ್ದರೂ ಅದಕ್ಕೆ ತಕ್ಕುದಾಗಿ ಜನರಲ್ಲಿ ಜ್ಞಾನ ವರ್ಧಿಯಾಗಿಲ್ಲವೆಂದೇ ಹೇಳಬೇಕು. ಇತಿಹಾಸಕರರು ಇತಿಹಾಸಕ್ಕಿಂತ ಮುಂಚಿನ ಹಾಗೂ ಸಾಮಾನ್ಯ ಇತಿಹಾಸವನ್ನು ವಿವರಿಸುತ್ತಾರೆ. ಇತಿಹಾಸಕ್ಕಿಂತ ಹಿಂದೆಯೇ ಜೈನ ಧರ್ಮವಿತ್ತು ಎಂದು ತಿಳಿಸುತ್ತಾರೆ. ಜೈನಧರ್ಮದ ಪ್ರಥಮ ಸಂಸ್ಥಾಪಕರು ಯಾರು ಎಂದು ಯಾವ ಇತಿಹಾಸವೂ ವಿವರಿಸಿಲ್ಲ ಎಂದರೆ ಆಶ್ಚರ್ಯವೇ ಅಲ್ಲವೇ?

ಇಂಗ್ಲೆಂಡಿನ ಮೇಜರ್ ಜನರಲ್ ಫೋರ್ಲೊಂಗ್ ಹೇಳುತ್ತಾರೆ "ಜೈನ ಧರ್ಮದ ಆರಂಭದ ಬಗ್ಗೆ ತಿಳಿದುಕೊಳ್ಳುವುದು ಅಸಾಧ್ಯ". ಬನಾರಸ್ ಸಂಸ್ಕೃತಿ ವಿಶ್ವ ವಿದ್ಯಾಲಯದ ಪ್ರಾಧ್ಯಾಪಕ ಸ್ವಾಮಿ ರಾಮಾಮಿಶ್ರಾಜಿ ಶಾಸ್ತ್ರಿ ಹೇಳುವರು "ವಿಶ್ವದ ಆರಂಭದೊಂದಿಗೆ ಜೈನ ಧರ್ಮವು ಕೂಡ ಆರಂಭವಾಯಿತು. ವೇದಕ್ಕಿಂತ ಜೈನ ಧರ್ಮವು ಹಳೆಯದು ಎಂದು ನಾನು ಹೇಳಲು ಬಯಸುತ್ತೇನೆ. ಬಿ.ಜಿ.ತಿಲಕ್ ಹೇಳುವುದೇನೆಂದರೆ, ಭಗವಾನ್ ಮಹಾವೀರರು ಪುನಃ ಜೈನ ಧರ್ಮವನ್ನು ಕಲಿಸಿಕೊಟ್ಟರು. ಅವರಿಗಿಂತ ಮೊದಲು 23 ಜನ

ಬೋಧಕರು ಇದ್ದರು. ಅವರು ಜೈನ ಧರ್ಮದ ಪ್ರಚಾರವನ್ನೂ ಕೈಗೊಂಡಿದ್ದರು. ಅಂದಿನಿಂದ ಜೈನಧರ್ಮದ ಪ್ರಾಚೀನತೆ ಆರಂಭವಾಯಿತು".

ಭಗವಾನ್ ಮಹಾವೀರರು ಜೈನ ಧರ್ಮದ ಸಂಸ್ಥಾಪಕರಲ್ಲ. ಅವರು 24 ಜನ ತೀರ್ಥಂಕರರಲ್ಲಿ ಕೊನೆಯವರು. ನಾನು ಹೊಸ ಧರ್ಮದ ಬೋಧನೆಯನ್ನೇನೂ ಮಾಡುತ್ತಿಲ್ಲ ಎಂದು ಹೇಳಿದ್ದರು. ಅದನ್ನು ಹಿಂದೆಯೇ ಸಾಕಷ್ಟು ಜಿನೇಶ್ವರರು ಪ್ರತಿಪಾದಿಸಿದ್ದರು.

ಜೈನ ಶಿಲ್ಪಕಲೆಯಲ್ಲಿ ಎಲ್ಲೂ ಜೈನ ಧರ್ಮದ ಪ್ರಥಮ ಸ್ಥಾಪಕರ ಬಗ್ಗೆ ಉಲ್ಲೇಖನಗಳಿಲ್ಲ. ಭಗವಾನ್ ರಿಷಭದೇವ ಅವರು ಅವಸಾರ್ಪಿಣಿಯ ಪ್ರಥಮ ತೀರ್ಥಂಕರರು (ಯುಗದ ಉತ್ತರಾರ್ಧ), ಆದರೆ ಎಲ್ಲ ಸಮಯಕ್ಕೂ ಅಲ್ಲ. ಪ್ರತಿಯೊಬ್ಬ ತೀರ್ಥಂಕರರು ಹೇಳಿರುವುದೇನೆಂದರೆ "ಎಷ್ಟು ಜನ ತೀರ್ಥಂಕರರು ಹೇಳಿರುವರೋ ನಾನು ಅದನ್ನೇ ಹೇಳುವುದು". ತಾನು ಹೊಸದೊಂದು ಹೇಳುತ್ತಿದ್ದೇನೆ ಅಥವಾ ಹೊಸ ಧರ್ಮವೊಂದರ ಪ್ರಚಾರ ಮಾಡುತ್ತಿದ್ದೇನೆ ಎಂದು ಯಾವ ತೀರ್ಥಂಕರರು ಸಾರಿಲ್ಲ.

ಎಲ್ಲ ಧರ್ಮಗಳಿಗೂ ಸಂಸ್ಥಾಪಕರು ಇದ್ದೇ ಇರುತ್ತಾರೆ ಹಾಗೂ ಅವರು ಕಲ್ಲಿನ ಶಾಸನಗಳಲ್ಲಿ ಅದನ್ನು ಬರೆಸುತ್ತಿದ್ದರು. ಆದರೆ ಜೈನ ಶಾಸನದಲ್ಲಿ ಎಲ್ಲಿಯೂ ಜೈನ ಧರ್ಮ ಸಂಸ್ಥಾಪಕರ ಹೆಸರು ಕಂಡುಬಂದಿಲ್ಲ. ಅದರಿಂದ ಇದು ತುಂಬಾ ಹಳೆಯ ಧರ್ಮವೆಂದು ಪರಿಗಣಿಸಲಾಗುತ್ತದೆ.

ಏನಾದರೂ ಐತಿಹಾಸಿಕ ಸಾಕ್ಷಾಧಾರಗಳಿವೆಯೋ ಎಂದು ಕೆಲವರು ಕೇಳಬಹುದು, ಹೌದು ಅಂಥ ಸಾಕ್ಷ್ಯಾಧಾರಗಳು ಇವೆ.

ನಮಗೆ ದೊರೆತಿರುವ ಧಾರ್ಮಿಕ ಗ್ರಂಥಗಳಲ್ಲೇ ವೇದ ತುಂಬಾ

ಪ್ರಾಚೀನವಾದದು. ಅವು ಕನಿಷ್ಠ 500 ವರ್ಷ ಹಳೆಯದು. ಭಗವಾನ್ ರಿಷಭ್‌ದೇವ್ ಹಾಗೂ ಭಗವಾನ್ ಅರಿಷ್ಟನೇಮಿ ಮತ್ತು ಇತರರ ಬಗ್ಗೆ ವೇದದಲ್ಲಿ ಬರೆಯಲ್ಪಟ್ಟಿದೆ. ಅನೇಕ ಮಂತ್ರಗಳಲ್ಲಿ ಇವರುಗಳ ಹೆಸರು ಇವೆ. ವೇದಕ್ಕಿಂತ ಪೂರ್ವದಲ್ಲಿ ಜೈನ್‌ಧರ್ಮವಿತ್ತೆಂದು ಪ್ರಮಾಣೀಕರಿಸುತ್ತವೆ. "ಅರಣ್ಯಕ" "ಶ್ರೀಮದ್ ಭಗವತ್" ಹಾಗೂ "ಪುರಾಣ" ಗಳು ಇದನ್ನು ರುಜುವಾತುಪಡಿಸುತ್ತವೆ. 24 ಜನ ಜೈನ ತೀರ್ಥಂಕರರು ಇದ್ದರೆಂಬುದನ್ನು ಈ ಗ್ರಂಥಗಳು ಒಪ್ಪಿಕೊಳ್ಳುತ್ತವೆ. ಇವುಗಳಲ್ಲಿ ಭಗವಾನ್ ರಿಷಬ್‌ದೇವ ಹಾಗೂ ಜೈನರ ಪವಿತ್ರಕ್ಷೇತ್ರಗಳಾದ ಶತ್ರುಂಜಯಾ ಹಾಗೂ ಗಿರ್‌ನಾರ್ ಪರ್ವತಗಳ ವರ್ಣನೆ ಬರುತ್ತದೆ.

ವೇದದಲ್ಲಿರುವ ಮಂತ್ರಗಳು ಜೈನ ಪ್ರಾಚೀನತೆಯನ್ನು ನ್ಯಾಯಯುತವಾದದು ಎಂದು ಹೇಳುತ್ತವೆ. ಜೈನ ಪ್ರಾಚೀನತೆಯು ವೇದದ ಮೇಲೆ ಅವಲಂಬಿಸಿವೆಯೆಂದು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ವಿದ್ವಾಂಸರಾದ ಹರ್ಯನ ಜಾಕೋಬಿ, ಡಾ॥ ರಾಧಾಕೃಷ್ಣನ್ ಹಾಗೂ ತಿಲಕ್ ಅವರು ಒಪ್ಪಿಕೊಂಡಿರುವರು.

ವೇದಾಂತ ಪರಿವ್ರಜಾಕಾಚಾರ್ಯರು ಕೂಡ ಜೈನ ಪ್ರಾಚೀನತೆಯನ್ನು ಒಪ್ಪಿಕೊಂಡಿರುವರು. ಮಹೆಂಜೋದಾರೋದ ನಾಗರೀಕತೆ 5000 ವರ್ಷ ಹಳೆಯದು "ಯೋಗ ಮುದ್ರಾ" ಎಂಬ ಲೋಹದ ಪಟ ಹಾಗೂ "ಜಿನೇಶ್ವರ" ಮುದ್ರೆಗಳು ದೊರೆತಿವೆ.

(1) "ಜೈನ ಧರ್ಮವು ವೇದಗಳಿಗಿಂತ ಪೂರ್ವದಲ್ಲಿ ಇತ್ತು ಎನ್ನುವುದರಲ್ಲಿ ಆಶ್ಚರ್ಯವೇನೂ ಇಲ್ಲ".

–ಡಾ॥ ಎಸ್.ರಾಧಾಕೃಷ್ಣನ್

(2) "ಜೈನ ಧರ್ಮವು ಸತ್ಯ, ಉನ್ನತವಾದದು ತುಂಬಾ ಹಳೆಯ ಪ್ರಾಚೀನ ಧರ್ಮವು, ಜೈನ ಶಾಸನಗಳ ಬಗ್ಗೆ ವೇದದಲ್ಲಿ ಉಲ್ಲೇಖನೆಗಳಿವೆ".

–ವೇದಾಂತ ಪರಿವ್ರಜಕಾಚಾರ್ಯ ಯೋಗಿ ಜೀವಾನಂದ ಪರಮಹಂಸ

(3) ಪ್ರೊ॥ ಪ್ರಾಣನಾಥ ವಿದ್ಯಾಲಂಕಾರರು ಹೇಳುತ್ತಾರೆ "ಇಂಡಸ್‌ನ ಮುದ್ರೆ ಸಂ.499 ಶಿಲೆಯಲ್ಲಿ ಕೆತ್ತಿರುವಂತೆ ಜಿನೇಶ್ವರ ಅಥವಾ ಜಿನೇಶಾ ಎಂದು ಇದೆ" (ಜೈನ, ಜ್ಯೋತಿ ಪ್ರಸಾದ್, ಜೈನಧರ್ಮ ಅತ್ಯಂತ ಹಳೆಯ ಧರ್ಮ).

(4) ಲಕ್ಷ ವರ್ಷಗಳಿಗೂ ಹಳೆಯದಾದ ರಾಜವಂಶಗಳಿಗೂ ಪೂರ್ವದಲ್ಲಿ ಇದ್ದುದೇ ಈಜಿಪ್ತ ಸಂಸ್ಕೃತಿ, ಅದು ಕೂಡ ಜೈನ ಸಂಸ್ಕೃತಿಯ ಸಮಾನಾಂತರ ಕಾಲದ್ದು ಎಂದು ಹೇಳಬಹುದು.

–ಡಾ॥ ರಾಬರ್ಟ್ ಚರ್ಚವೆಲ್

ಇದಕ್ಕೂ ಹೊರತಾಗಿ ಮೆಹೆಂಜೋದಾರೊ ಸಂಸ್ಕೃತಿಯು ಬೇರೆ ಸಂಸ್ಕೃತಿಗಿಂತ ಜೈನ ಧರ್ಮವನ್ನು ಸಮಾನ ಲಕ್ಷಣವುಳ್ಳದ್ದು ಎಂದು ಹೇಳುತ್ತದೆ. ಪ್ರಾಚೀನ ವಾಸ್ತುಶಾಸ್ತ್ರದ ಪ್ರಕಾರವೂ ಜೈನ್‌ಧರ್ಮವು ಪ್ರಾಚೀನತೆಯನ್ನು ಹೊಂದಿದೆ ಎಂದು ಹೇಳಬಹುದಾಗಿದೆ.

ಈಜಿಪ್ತನಲ್ಲಿದ್ದ ಪ್ರಾಚೀನ ಸಂಸ್ಕೃತಿಯ ಕಾಲಕ್ಕೆ ಜೈನ ಧರ್ಮವೂ ಸೇರುತ್ತದೆ ಅದು ಹಳೆಯದಾದುದು. ಎಲ್ಲಕ್ಕಿಂತ ಹಳೆಯ ವಿಗ್ರಹಗಳು ಜಗತ್ತಿನಲ್ಲಿ ದೊರಕಿದುದು ಎಂದರೆ ಜೈನ ತೀರ್ಥಂಕರರದೇ– ಹಾಗೂ ಅವನ್ನು ಪಾಟ್ನಾದ ವಸ್ತು ಸಂಗ್ರಹಾಲಯದಲ್ಲಿ ಇರಿಸಲಾಗಿದೆ. ಬ್ರಾಹ್ಮಿ ಲಿಪಿಯಲ್ಲಿ ಜೈನ ಶಿಲಾಶಾಸನಗಳು ಲಭ್ಯವಾಗಿವೆ. ಪ್ರಾಚೀನ ಗುಹೆಗಳು ಹಾಗೂ ವಿಗ್ರಹಗಳು ಕೂಡ ಜೈನ ಧರ್ಮವು ಪ್ರಾಚೀನವಾದುದು ಎಂದು ಪುಷ್ಟೀಕರಿಸುತ್ತವೆ.

DEVELOPMENT OF ARCHITECTURE AND THE CULT OF BHAKTI

Jainism is not a dry philosophy based exclusively on subtle logic, but it is a fountain of devotional religion. To manifest the feelings of devotion or Bhakti, the Jains have raised monumental shrines in many parts of India. The construction of temples and imposing images has provided the finest specimens of architecture in the world. As an illustration, the temples of Mount Abu (Dilwara), and Ranakpur in Rajasthan are famous for their unparalleled decorative art on stone. Palitana, the temple of shatrunjaya in Saurashtra, is said to be unique in Asia for having innumerable temples constructed on a hillock . In this way, these temples have sustained the development of Indian architecture in the past several centuries. It is the view of noted architects that among the tamples of India, at least, every Jaina shrine is a model of decorative art on stone.

IMAGE WORSHIP

In Jainism image worship is of hoary antiquity. The first image of Lord Rishabha, the first Teerthankara was made on Ashtapad by Emperor Bharat and was installed in a temple on the summit of mount Kailash. There are authentic references in the Bhagavati Sutra, the Sthanga Sutra, the Rayappaseni a Sutra, the Upashakdasang and many other connonical works among the sacred Scriptures to prove that images of Jainas were worshipped by the people in ancient India. The Trishastisalaka-Purush Charitra of Acharya Hemchandra Soorijee has referred to the memorials erected by the people for offering worship to Lord Rishbha. These facts in the ancient scriptures prove the hoary antiquity of image worship in India,

A story is related about king Udayana and king Chandpradyot who were contemporaries of Lord Mahaveer. Udayana worshiped a Jin image according to this story. Another illustration referred to the scriptures is of Abhaykumar. He sent a box to Ardrakumar and asked him to open it alone. When the box was opened, Ardrakumar found an image of Jin in it and remembering his previous birth he attained

enlightenment & deep faith in Jinism.These scriptural stories prove that image of Jinas were worshipped even during the time of **Lord Mahaveer**.

The excavations on the Indus Valley sustantiates the contention that image worship was prevalent among the Indus valley people about five thousand years ago. The statue discovered at Harappa is a male torso in nude form. It resembled the torso found at Lohianpur near patna, the oldest Jain image unearthed in India. The Harappa torso like the Lohianpur image was in the characteristic pose of physical abandon or Kayotsarga. The seals of the Indus Valley also depicted the Yogic pose of Lord Jina. The People of the Indus Valley were mostly followers of Jainism.

King Kharvel of Orissa in the 3 rd century B.C., brought back from Magadh to Orissa an image of Adi called the Kaling Jin . This image was that of lord Rishabha. It was taken to Magadh by a Nand king after defeating Kalinga in a battle. The Hathigumpha inscriptions of king Kharavel in orissa go to prove that image worship was prevalent in Kalinga during his time. Another illustration to prove the antiquity of image worship are the inscriptions of the yadva Stupa

image discovered at Kankali Tila at Mathura. These inscriptions belonged to the period of Lord Parshva who lived some two hundred and fifty years before Lord Mahaveer. There are Jain images in Rajasthan dating back to Lord Mahaveer. Samprati, the Jain Emperor and the grandson of Ashok built many temples and made Jain images according to literary evidence and also legends. All these facts both scriptural and epigraphical prove beyond dispute that Moorti Pooja was widely prevalent among the Jainas from time immemorial.

One can not adduce a single authentic evidence to prove that image worship was not practised by the Jains from such pre-historic days as those of Lord Rishabh and that it was a part and parcel of Jain religion from the dawn of human culture and civilization in India.

Swamy Dayananda Saraswati founder of the Arya Samaj and an uncompromising cirtic of image worship has declared that image worship forming a part of religion was first introduced by Jainas in India. This View of Swamy Dayanand has been well substantiated by notable scholars in whose view Moorti Pooja had its origin in Jainism.

ಪ್ರಚಾರ ಕ್ರಮ

ಒಮ್ಮೆ ಒಬ್ಬ ಭೂಗರ್ಭಶಾಸ್ತ್ರಜ್ಞ ಹೇಳಿದರು "ಯಾರಾದರೂ ಭಾರತದ ಯಾವುದೇ ಪ್ರದೇಶದಲ್ಲಿ ಏಳು ಮೈಲಿ ವ್ಯಾಸದ ವರ್ತುಲವನ್ನು ರಚಿಸಿ ಅದನ್ನು ಕೊರೆದರೆ ಅಲ್ಲಿ ಜೈನ ಸಂಸ್ಕೃತಿಯ ಹಾಗು ನಾಗರಿಕತೆಯ ನಮೂನೆಗಳನ್ನು ಪಡೆಯಬಹುದು.

ಒಬ್ಬ ಸಾಮಾನ್ಯ ಮನುಷ್ಯ ಹೀಗೆ ಹೇಳಿದರೆ ಇದೊಂದು ಅತಿಶಯೋಕ್ತಿ ಎಂದು ಅಲ್ಲಗೆಳೆಯಬಹುದು, ಆದರೆ ಯಾವಾಗ ಭೂಗರ್ಭ ಶಾಸ್ತ್ರಜ್ಞರು ಹೇಳಿದರೋ ಅವರಲ್ಲಿ ಸ್ವಲ್ಪವಾದರೂ ಸತ್ಯ ಇರಲೇಬೇಕು.

ಒಂದು ಕಾಲದಲ್ಲಿ ಭಾರತದಾದ್ಯಂತ ಜೈನ ಧರ್ಮವು ಜನಪ್ರಿಯವಾಗಿತ್ತು. ಆಗ ಅದು ಕೂಡ ಒಂದು ಪ್ರಮುಖ ಧರ್ಮವಾಗಿತ್ತು.

"ಭಾರತೀಯ ಮತ ದರ್ಪಣ" ದ ಪ್ರಕಾರ ಆಗ ಜೈನರ ಜನಸಂಖ್ಯೆಯು 40 ಕೋಟಿ ಇತ್ತು. ಹುಯೆನ್‌ಸ್ಯಾಂಗ್ ಹಾಗೂ ಎನ್‌ಸ್ಯಾಂಗ್ ಪ್ರಕಾರ ಆಗ ತುಂಬಾ ಜೈನ ಸಾಧುಗಳು ಸಂತರು ಇದ್ದರು. ಇನ್ನೊಂದು ಗಮನಾರ್ಹ ಸಂಗತಿಯೆಂದರೆ ಅಂದಿನ ರಾಜರುಗಳಾದ ಶ್ರೇನಿಕ್, ಉದಯಿ, ಅಶೋಕ್, ಚಂದ್ರದೋತಾ, ಸಂಪ್ರಾತಿ, ಖರ್ವೆಲ್, ಚಂದ್ರಗುಪ್ತ, ಪ್ರಿಯದರ್ಶಿ, ಕುಮಾರಪಾಲ ಮುಂತಾದವರು ಜೈನ್‌ಧರ್ಮ ಪ್ರಸಾರಕ್ಕಾಗಿ ತುಂಬಾ ಸಹಾಯ ಮಾಡಿದರು. ಶ್ರೇನಿಕ್‌ನ ಆಳ್ವಿಕೆಯ ಸಮಯದಲ್ಲಿ ಆತನ ಮಂತ್ರಿಯೂ ಆಗಿದ್ದ ರಾಜಕುಮಾರ ಅಭಯಕುಮಾರನು ಆರ್ದ್ರಪುರದ (ಈಗ ಅಡೇನ್) ರಾಜಕುಮಾರನನ್ನು ಜೈನಧರ್ಮಕ್ಕೆ

ಮತಾಂತರಗೊಳಿಸಿದನು. ನಂತರ ಜೈನ ಮುನಿಗಳ ಆಜ್ಞೆಯನ್ನು ಸ್ವೀಕರಿಸಿದನು.

ಗ್ರೀಕ್ ಇತಿಹಾಸಕಾರರು ಟಿಪ್ಪಣಿ ಮಾಡಿಕೊಂಡಿರುವುದೇನೆಂದರೆ, ಗ್ರೀಸ್ ಸಾಮ್ರಾಟ್ ಅಲೆಕ್ಸಾಂಡರ್ ಭಾರತವನ್ನು ಗೆದ್ದು ಮರಳುವಾಗ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿ ಒಬ್ಬ ಜೈನ ಸನ್ಯಾಸಿಯನ್ನು ಕೊಂಡೊಯ್ದಿದ್ದನಂತೆ, ಆ ಜೈನ ಸಾಧುವಿನ ಗೋರಿಯು ಗ್ರೀಸ್‌ನ ಅಥೆನ್ಸ್‌ನಲ್ಲಿ ಇಂದಿಗೂ ಇದೆ ಎಂದು ಹೇಳಲಾಗುತ್ತದೆ. "ಮಹಾವಂಶಪುರಾಣ" ದ ಪ್ರಕಾರ ಬೌದ್ಧ ಹಾಗೂ ಜೈನ ಧರ್ಮಗಳು ನಂತರ ಸಿಲೋನ್‌ನಲ್ಲಿ (ಈಗಿನ ಶ್ರೀಲಂಕ) ಜನಪ್ರಿಯವಾದವು. ಸಿಲೋನಿನ ರಾಜನೊಬ್ಬನ ಜೈನ ಸನ್ಯಾಸಿಗಳಿಗಾಗಿ ಒಂದು ಉಪಾಶ್ರಯಾ ಹಾಗೂ ಒಂದು ಜೈನ ಮಂದಿರವನ್ನು ಕಟ್ಟಿಸಿದ್ದನು. ರೋಮ್‌ನಲ್ಲಿರುವ ವಸ್ತು ಸಂಗ್ರಹಾಲಯದಲ್ಲಿ ಭಗವಾನ್ ಪಾರ್ಶ್ವನಾಥರವರ ಭವ್ಯವಾದ ವಿಗ್ರಹವೊಂದು ಇರುವುದು. ಅದು ಅಮೇರಭಾನ್ ನದಿಯ ತೀರದಲ್ಲಿರುವ ಗುಹೆಯಲ್ಲಿ ದೊರಕಿತ್ತಂತೆ.

ಜೀಸಸ್ ಕ್ರೈಸ್ತ ಕೂಡ ಜೈನ ಸನ್ಯಾಸಿಗಳ ಸಂಪರ್ಕದಲ್ಲಿ ಬಂದಿದ್ದನಂತೆ, ಟಿಬೇಟ್‌ನಲ್ಲಿರುವ ಹಿಮಾಲಯದ ಗುಹೆಯೊಂದರಲ್ಲಿ ದೊರಕಿದ ತಾಳೆಗರಿಯಲ್ಲಿ ಬರೆದಿರುವಂತಹುದು ದೊರಕಿದೆ. ಅದರಲ್ಲಿ ಈ ವಿಷಯ ಹೀಗೆ ಭಾರತದ ಗಡಿಯ ಆಚೆಗೂ ಜೈನ ಅವಶೇಷಗಳು ಸಾಕಷ್ಟು ದೊರತಿವೆ. ಅವುಗಳು ಜೈನ ಸಂಸ್ಕೃತಿಯೊಂದಿಗೆ ಹೋಲಿಕೆಯಾಗುತ್ತದೆ.

ಪ್ರಭೋಚಂದ್ರ ಸೇನ ಅವರು ಹೇಳುವಂತೆ ಬಂಗಾಲದ ಮೂಲ

ಧರ್ಮವು ಜೈನ ಆಗಿತ್ತು. ಬಂಗಾಲದ ಕೆಲವು ಆದಿವಾಸಿಗಳಲ್ಲಿ ಜೈನ ಸಂಸ್ಕೃತಿಯ ಕೆಲವು ಕುರುಹುಗಳು ಇಂದಿಗೂ ದೊರೆಯುತ್ತವೆ. "ಸರಕ್" ಎಂಬ ಆದಿವಾಸಿಗಳು ಇರುವರು. "ಶ್ರವಕ್" (ಎಂದರೆ ಜೈನ ಅನುಯಾಯಿ) ಎಂಬ ಶಬ್ದದಿಂದ "ಸರಕ್" ರೂಪಾಂತರಗೊಂಡಿರುವುದು. ಪೂರ್ವದಲ್ಲಿ ಜೈನ ಬದಲಿಗೆ "ಅರ್ಹತ್‌ಧರ್ಮ" "ಶ್ರಾದಕಧರ್ಮ" "ನಿಗ್ರಂಥಧರ್ಮ" ಎಂಬ ಶಬ್ದಗಳಿಂದ ಕರೆಯಲಾಗುತ್ತಿತ್ತು. ಆದ್ದರಿಂದ "ಸರಕ್" ಕೂಡ ಜೈನ ಆಗಿರಲು ಸಾಧ್ಯ. ಗ್ರೀಸ್‌ನ "ಅರ್ಭುಕ್" ರ ಜೀವನದಲ್ಲಿ ಕೂಡ ಜೈನ್‌ಧರ್ಮದ ಅನೇಕ ಗುಣ-ಲಕ್ಷಣಗಳು ಕಂಡುಬಂದಿವೆ. "ಅರ್ಬು" ಕೂಡ "ಅರ್ಹತ್" ದಿಂದ ಪಡೆಯಲಾಗಿದೆ.

ದಕ್ಷಿಣ ಭಾರತದ ಲಿಂಗಾಯತರು ಪೂರ್ವದಲ್ಲಿ ಜೈನ ಅನುಯಾಯಿಗಳಾಗಿದ್ದರು. ತಮಿಳುನಾಡಿನಲ್ಲಿರುವ ಅನೇಕ ಹಿಂದೂಗಳು ಜೈನ ಆಗಿದ್ದರು ಎಂದು ನಂಬಲಾಗುತ್ತದೆ. ಹಿಂದಿನ ಮದ್ರಾಸ್‌ರಾಜ್ಯದ (ಈಗಿನ ತಮಿಳುನಾಡು) ಮುಖ್ಯಮಂತ್ರಿಗಳೊಬ್ಬರು ಅವರ ಮೂಲ ಧರ್ಮ ಜೈನ ಆಗಿತ್ತು ಎಂದು ಹೇಳಿದ್ದರು. ಅವರ ಜಾತಿಯ ಹೊರತಾಗಿ ಇನ್ನೂ ಅನೇಕ ಜಾತಿಗಳು ಜೈನ ಅನುಯಾಯಿಗಳಾಗಿದ್ದರು. ಆಂಧ್ರಪ್ರದೇಶದ "ಕೋಮ್ಟಿ" ಗಳು ಜೈನ ಆಗಿದ್ದರು. ಅವರು "ಗೊಮ್ಮಟೇಶ್ವರ" ನ (ಬಾಹುಬಲಿ) ಪೂಜಕರಾಗಿದ್ದರು. ಆದ್ದರಿಂದ ಅವರನ್ನು "ಗೋಮಟಿ" ಎಂದು ಕರೆಯುತ್ತಿದ್ದರು. "ಕೋಮ್ಟಿ" ಈ ಶಬ್ದವನ್ನು "ಗೋಮ್ಟಿ" ಯಿಂದ ತಂದುಕೊಳ್ಳಲಾಗಿದೆ. ಅಯೋಧ್ಯೆಯ ಶ್ರೀವಾಸ್ತವರು ಜೇನು ಹಾಗೂ ಮಾಂಸದಿಂದ ದೂರವಿರುವವರು ಪೂರ್ವದಲ್ಲಿ ಜೈನ್‌ರಾಗಿದ್ದರು.

ಪ್ರಭಾವ

ಇತಿಹಾಸದಲ್ಲಿ ಎಲ್ಲರಿಗೂ ಏಳು-ಬೀಳುಗಳು ಇದ್ದೇಇದ್ದವು. ಅನುಯಾಯಿಗಳ ಸಂಖ್ಯಾಬಲದ ಆಧಾರದ ಮೇಲೆ ಹೇಳಬೇಕೆಂದರೆ ಆಗ ಇದು ಜೈನರ ಇಳಿತದ ಕಾಲ. ಆದರೂ ಗತಕಾಲವನ್ನು ನೋಡಲಾಗಿ ಅದು ಸಾಹಿತ್ಯಕವಾಗಿ, ಶಿಲ್ಪಕಲೆ ಹಾಗೂ ನಾಗರಿಕತೆಯ ದೃಷ್ಟಿಯಿಂದ ಅತ್ಯಂತ ವೈಭವಯುತವಾಗಿತ್ತು. ಆರು ಲಕ್ಷ ನುಡಿಗಳಿರುವ 9 ವಾಲ್ಯೂಮ್‌ನ ಧರ್ಮಗ್ರಂಥ "ಭುವಲಾಯಾ" ಪ್ರಪಂಚದ ಹತ್ತನೆಯ ವೈಚಿತ್ರ್ಯವೆಂದು ಹೇಳಲಾಗಿದೆ. ಇದನ್ನು 680 ರ ಕ್ರಿ.ಪೂ.ದಲ್ಲಿ ಜೈನ ಆಚಾರ್ಯರಾದ ಕುಮುದೇಂದು ಅವರು ಬರೆದಿದ್ದರು. ಬಹುತೇಕ ಅಂದಿನ ಸಮಕಾಲೀನ ಸಾಹಿತ್ಯ, ಕಲೆ, ವಿಜ್ಞಾನ ಹಾಗೂ ಭಾಷೆಗಳ ವಿವರಗಳು ಅದರಲ್ಲಿ ಇವೆ. ಅದರ ಒಂದು ಭಾಗವು ಇತ್ತೀಚೆಗೆ ಪ್ರಕಟಣೆಗೊಂಡಿದೆ. ಮುಂದಿನವುಗಳ ಸಂಶೋಧನೆ ಜಾರಿಯಲ್ಲಿದೆ.

ವಿದ್ವಾಂಸರ ಪ್ರಕಾರ ಈ ಪುಸ್ತಕವನ್ನು ಸಂಖ್ಯೆ ಆಧಾರದ ಮೇಲೆ ಬರೆಯಲಾಗಿದೆ. 1 ರಿಂದ 64 ಅಕ್ಷರ ಮಾಲೆಯ ನಾದ, ಧ್ವನಿಯನ್ನು ಪ್ರತಿನಿಧಿಸುತ್ತವೆ. 27 ಸಾಲಿನಲ್ಲಿ ಸಂಖ್ಯೆಗಳನ್ನು ಚೌಕಿಗಳಲ್ಲಿ ಅಳವಡಿಸಲಾಗಿದೆ ಹಾಗೂ ಸಂಖ್ಯೆಗಳನ್ನು ವಿಭಿನ್ ಅನುಕ್ರಮಗಳಲ್ಲಿ ಓದತಕ್ಕದ್ದು. ಅದನ್ನು 718 ಭಾಷೆಗಳಲ್ಲಿ ಓದಬಹುದು ಹಾಗೂ 363 ಧರ್ಮಗಳ ಹಾಗೂ 64 ಕಲೆ ಹಾಗೂ ವಿಜ್ಞಾನದ ಸವಿಸ್ತಾರವಾದ ಸಂಗ್ರಹವಿದೆ.

ಇಂದಿನ ಎಲ್ಲ ತಮಿಳು ವಿದ್ವಾಂಸರು ಹೇಳುವುದೇನೆಂದರೆ ಜೈನ ಯತಿಗಳೇ ತಮಿಳು ಭಾಷೆಯ ಮೂಲ ಕರ್ತರು ಹಾಗೂ ಅದನ್ನು ಅಭಿವೃದ್ಧಿಗೊಳಿಸಿದವರು. "ಶಿಲಪ್ಪಡಿಗರಮ್" ಹಾಗೂ "ತಿರುಕ್ಕುರಲ್" ಧರ್ಮಗ್ರಂಥಗಳ ಲೇಖಕರು ಜೈನ ಯತಿಗಳು. ತಮಿಳಿನ ಪ್ರಥಮ ವ್ಯಾಕರಣ ಪುಸ್ತಕ "ನಾನ್ನುವಲ್" ರಚಿಸಿದವರೂ ಜೈನ ಸನ್ಯಾಸಿಗಳು ಕನ್ನಡ ಭಾಷೆಯ ರಚನೆಗೆ ಜೈನ ಧರ್ಮದ ದೇಣಿಗೆಯು ಅಪಾರವಿದೆ. ಕನ್ನಡದ ಪ್ರಥಮ ಕವಿ "ಪಂಪ" ನು ಜೈನ ಆಗಿದ್ದನು. ಕನ್ನಡದ ಎಲ್ಲಾ ಪ್ರಕಾರದ ಸಾಹಿತ್ಯಕ್ಕೆ ಜೈನ ಸಂಸ್ಕೃತಿಯ ಸ್ಪರ್ಶವಿದೆ.

ಜೈನ ಸಾಹಿತ್ಯವು ಅಭಿವೃದ್ಧಿಗೊಳಿಸದಿದ್ದಿದ್ದರೆ ಗುಜರಾತಿ ಸಾಹಿತ್ಯವು ಸಪ್ಪೆಯಾಗಿರುತ್ತಿತ್ತು. ಅದರ ಮೂಲವು ಹೇಮಚಂದ್ರಾಚಾರ್ರು ಬರೆದ ವ್ಯಾಕರಣ ಪುಸ್ತಕದಿಂದ ಆರಂಭಗೊಳ್ಳುತ್ತದೆ. ಗುಜರಾತಿ ಭಾಷೆಯಲ್ಲಿ ಇರುವ ವಿವಿಧ ಶಾಸ್ತ್ರಗಳು (ವಿಜ್ಞಾನಗಳು), ಕಥೆಗಳು ಹಾಗೂ ತತ್ವಜ್ಞಾನದ ವಿಚಾರಗಳು ಜೈನ ಸಂಸ್ಕೃತಿಯಿಂದ ಪ್ರಭಾವಯುತವಾಗಿವೆ.

ಹಿಂದಿ, ರಾಜಸ್ತಾನಿ, ಉರ್ದು, ಇಂಗ್ಲೀಷ್, ಲ್ಯಾಟಿನ್ ಹಾಗೂ ಜರ್ಮನ್ ಭಾಷೆಗಳು ಜೈನ ಸಂಸ್ಕೃತಿಯಿಂದ ಪ್ರಭಾವಕ್ಕೊಳಗಾಗಿವೆ ಎಂದರೆ ಅತಿಶಯೋಕ್ತಿ ಎನ್ನಿಸಬಹುದು. ಇಂದಿಗೂ ಜೈನ ಸಾಧುಗಳು ಹಾಗೂ ವಿದ್ವಾಂಸರು ಈ ಎಲ್ಲಾ ಭಾಷೆಯ ಸಾಹಿತ್ಯಗಳಲ್ಲಿ ಪ್ರಮುಖ ಸ್ಥಾನ ಪಡೆದಿರುವರು.

ಜೈನ ಸಾಹಿತ್ಯವು ಎಷ್ಟು ಆಳವಾಗಿದೆ ಎಷ್ಟು ವಿಶಾಲವಾಗಿದೆ ಎಂಬುದನ್ನು ಅಕ್ಷರ ಜ್ಞಾನವುಳ್ಳವರು ಅರ್ಧಮಾಗಧಿ, ಸಂಸ್ಕೃತ, ಪ್ರಕೃತ, ಭೂತಪಿಶಾಚಿ ಹಾಗೂ ಅಪಭ್ರಂಶ ಭಾಷೆಗಳ ಉದಾಹರಣೆಗಳೊಂದಿಗೆ ಹೇಳುವರು. ಜೈನ ವಿವಿಧ ಕೊಡುಗೆಗಳಲ್ಲಿದ್ದಿದ್ದರೆ ಸಂಸ್ಕೃತ ಸಾಹಿತ್ಯವೂ ಬಡವವಾಗಿರುತ್ತಿತ್ತು.

ಏಳು ವಿವಿಧ ಅರ್ಥಗಳನ್ನು ಕೊಡುವ ಒಂದೇ ಪದ್ಯ "ಸಪ್ತಸಂಧಾನ" ದ ಸಂಯೋಜಕರು ಜೈನ ಆಚಾರ್ಯರು. "ರಾಜಾನೊ ದಡತೆ ಸೌಖಂ" 8 ಲಕ್ಷ ಅರ್ಥಗಳನ್ನು ಕೊಡುವಂತಹುದು. ಇದನ್ನು ಕೂಡ ಜೈನ ಯತಿಗಳೇ ಸಂಯೋಜನೆ ಮಾಡಿದ್ದು, ಜೈನ ಯೋಗಿಗಳು ಆಳವಾಗಿ ವಿರಕ್ತಿ ಹೊಂದಿದವರಾಗಿದ್ದರೂ ಕಾಮಶಾಸ್ತ್ರ, ಸಂಗೀತ, ಆಭರಣಗಳು, ವಜ್ರಗಳು ಹಾಗೂ ಖಗೋಳಶಾಸ್ತ್ರ ವಿಷಯಗಳ ಮೇಲೆ ಅಧಿಕಾರಯುತವಾಗಿ ಕೃತಿಗಳನ್ನು ರಚಿಸಿದ್ದಾರೆ.

ಡಾ|| ಹೆರ್ತಾಳ್ ಹೇಳುತ್ತಾರೆ:- "ಬೃಹತ್ತಾದ ಜೈನ ಸಂಸ್ಕೃತ ಸಾಹಿತ್ಯವಿಲ್ಲದಿದ್ದರೆ ಸಂಸ್ಕೃತ ಕವಿತೆಗಳು ಏನಾಗುತ್ತಿದ್ದವು"?

A sinner May be forgiven
but his sinful act must
never be condoned.

ಜೈನ ಕಲೆ ಹಾಗೂ ಸೌಂಧರ್ಯಶಾಸ್ತ್ರ

ಜೈನ ಸಂಸ್ಕೃತಿಯು ಕೇವಲ ಸಾಹಿತ್ಯರಂಗಕ್ಕಷ್ಟೇ ಕಾಣಿಕೆ ನೀಡಿಲ್ಲ, ಕೆಲ, ಚಿತ್ರಕಲೆ ಹಾಗೂ ಶಿಲ್ಪಕಲೆಗೂ ಸಾಕಷ್ಟು ದೇಣಿಗೆಯನ್ನಿತ್ತಿದೆ. ಧರ್ಮವು ಎಲ್ಲಾ ಕಲೆಗಳಿಗಿಂತಲೂ ಅಗಾಧವಾದುದು ಎಂದು ಭಾರತದ ನಾಲ್ಕು ಮೂಲೆಗಳಲ್ಲಿ ಲಭ್ಯವಾಗಿರುವ ಜೈನ ಶಿಲ್ಪಕಲೆಯೇ ಸಾರುತ್ತದೆ. ಪ್ರಾಚೀನ ಸ್ತೂಪಗಳು, ಸಲಹೆಗಳು, ಕೆತ್ತಿರುವ ದೇವಾಲಯಗಳು ಹಾಗೂ ವಿವಿಧ ಮಾದರಿಯ ಶಿಲ್ಪಕಲೆಗಳು ಇವೆ. ಇನ್ನೂ ಹೆಚ್ಚು ಉಲ್ಲೇಖಿಸುವಂತಹ ಜನಪ್ರಿಯ ಸ್ಥಳಗಳೆಂದರೆ, ಬಿಹಾರದ ಬಾರಾಬರಣಿ ಗುಹೆಗಳು, ಓರಿಸ್ಸಾ ಭುವನೇಶ್ವರದ ಗುಹೆಗಳು, ಖಂಡಗಿರಿಯ ಉದಯಗಿರಿ, ಎಲಿಫಂಟಾ ಗುಹೆಗಳು ಹಾಗೂ ಪಡುಕೊಡ್ಡೆಯ ಸಿನ್ನಾಸಾಲ ಗುಹೆಗಳು, ಇತ್ತೀಚೆಗೆ ಸಂಶೋಧನೆಯಾದ ಮಹಾರಾಷ್ಟ್ರದ ನಾಸಿಕದ ಹತ್ತಿರವಿರುವ ಗುಹೆಗಳು, ಗಿರನಾರ್ ಹಾಗೂ ಢಂಕ್‌ದ ಗುಹೆಗಳು, ಮಥುರಾದ ಸ್ತೂಪಗಳು ಹಾಗೂ ಎಲ್ಲೋರಾದ ಗುಹಾಂತರ ದೇವಾಲಯಗಳು. ಇವುಗಳು ಕೇವಲ ಜೈನ ಸಂಕೇತಗಳಲ್ಲದೆ ಭಾರತೀಯ ಕಲೆಯ ಪ್ರತೀಕಗಳಾಗಿವೆ.

ದಕ್ಷಿಣದಲ್ಲಿರುವ ಸೀತನ್ನಾವಾಸಲ್ ಗುಹೆಗಳಲ್ಲಿರುವ ಸುಂದರ ಹಾಗೂ ಆಕರ್ಷಕವಾದ ಭಿತ್ತಿ ಚಿತ್ರಗಳು, ಕಲ್ಪಸೂತ್ರದ ಚಿನ್ನದ ಲೇಪನದ ಚಿತ್ರಗಳು ಹಾಗೂ ಉತ್ತರಾಧ್ಯಾಯನದ ಮೂಲಗ್ರಂಥಗಳು ಪ್ರಾಚೀನ ಚಿತ್ರಕಲೆಯ ಶ್ರೇಷ್ಠ ಉದಾಹರಣೆಗಳು.

ಗುಜರಾತ್‌ದ ಪಲಿಟಾನಾದ ಏಕೈಕ ಗುಡ್ಡವಿರುವ ಶತ್ರುಂಜಯಾ 2500 ರಿಂದ 3000 ದೇಗುಲಗಳನ್ನು ಹೊಂದಿದ್ದು ಜೈನ ಶಿಲ್ಪಕಲೆಯ ಅತ್ಯುಚ್ಚ

ಮಾದರಿಯಾಗಿದ್ದು ಕೇವಲ ಏಷಿಯಾದಲ್ಲಿ ಅಲ್ಲ, ಇಡೀ ಪ್ರಪಂಚದಲ್ಲೇ ಅಪೂರ್ವವಾದದ್ದು. ಸಂಗೀತದ ಸುಧೆಯನ್ನು ಹರಿಸುತ್ತ ಬಿಳಿಯ ಸಂಗಮವರಿ ಕಲ್ಲುಗಳಲ್ಲಿ ಹಾಲಿನ ಝರಿಯು ಹರಿಯುತ್ತಿದೆಯೋ ಎಂಬ ಭಾವನೆ ಬರುತ್ತದೆ. ದೇಲ್ವಾಡಾ ಮೌಂಟ್ ಅಬು, ಕುಂಭಾರಿಯಾ ಹಾಗೂ ರಣಕ್‌ಪುರ್ ದೇವಾಲಯಗಳು ಸೂಕ್ಷ್ಮ ಹಾಗೂ ಸುಂದರವಾದ ಜೈನ ಶಿಲ್ಪಕಲೆಯ ಭಂಡಾರಗಳೆಂದು ಹೇಳಬಹುದು. ಅಮೂಲ್ಯವಾದ ವಜ್ರ ರತ್ನಗಳು, ಶಿಲೆ ಹಾಗೂ ಮಣ್ಣಿನಲ್ಲಿ ರಚಿಸಲಾದ ಲಕ್ಷಗಟ್ಟಲೆ ಜೈನ ಪ್ರತಿಮೆಗಳು ಒಂದಕ್ಕಿಂತ ಒಂದು ಆಕರ್ಷಕವಾಗಿವೆ. ಇಂದಿಗೂ ಜೈನ ಮಂದಿರಗಳು ಶಿಲ್ಪಕಲೆ, ಚಿತ್ರಕಲೆ ಹಾಗೂ ಕೆತ್ತನೆಯ ಕುಸುರುಗಳಿಂದ ಕೂಡಿರುತ್ತವೆ.

ಅಹಿಂಸೆಯ ತತ್ವಗಳಿಂದ ಜೈನ ಧರ್ಮವು ತ್ವರಿತವಾಗಿ ಜಗತ್ತಿನಲ್ಲಿ ಬದುಕು ಹಾಗೂ ಚಿಂತನೆಗಳಲ್ಲಿ ಬದಲಾವಣೆಗಳನ್ನು ತಂದಿವೆ, ಅದು ಅನೇಕಂತ್ವದಾ ಹಾಗೂ ನಿಸ್ವಾರ್ಥತೆ, ಬೆಂಕಿಯಲ್ಲಿ ಪಶು, ಪ್ರಾಣಿಗಳನ್ನು ಆಹುತಿ ಕೊಡುವುದನ್ನು ನಿಷೇಧಿಸಿದ್ದಕ್ಕೆ ಜೈನ ಧರ್ಮಕ್ಕೆ ಕೃತಜ್ಞತೆಯನ್ನು ಸಲ್ಲಿಸಲೇಬೇಕು. ಪಶು ಬಲಿ-ದಾನಗಳು ಈಗ ಯಾವ ಧರ್ಮದಲ್ಲೂ ಮಾಡಕೂಡದು.

ಸತ್ಯ ಎನ್ನುವುದು ಎಲ್ಲರ ಸಿದ್ಧಾಂತಗಳ ಮೇಲೆ ಅವಲಂಬಿಸಿದೆ. ಈ ದೈವಿಕ ನಿಲುವು ಜೈನ ಧರ್ಮದಿಂದಲೇ ಉಂಟಾದುದು. ಜೈನ ತತ್ವಜ್ಞಾನದ ಪ್ರಕಾರ ಸತ್ಯವನ್ನು ಒಂದಲ್ಲ ಅಸೀತು ಮಾರ್ಗಗಳಿಂದ ಆಲೋಚಿಸಬಹುದು. ಅನೇಕ ಮಾರ್ಗಗಳಿಂದ ಅಲ್ಲ. ಅಸಂಖ್ಯಾತ ಮಾರ್ಗಗಳಿಂದ, ಅನಂತ ಮಾರ್ಗಗಳಿಂದ, ವಾಸ್ತವವಾಗಿ ಸತ್ಯವೆಂಬುದು ಸಾಪೇಕ್ಷವಾದದು. ಈ ಅಪೂರ್ವವಾದ ತತ್ವಗಳು ಮನುಕುಲಕ್ಕೆ ಜೈನ ಧರ್ಮದ ಕಾಣಿಕೆಯೆಂದೇ ಹೇಳಬೇಕು.

1. ಜೈನ ಕಾಂತಾಪ್ರಸಾದ್- "Religion of Thirthankars P-79

ನಮ್ಮ ಕೆಲವೇ ಕರ್ತವ್ಯಗಳು

ಧಾರ್ಮಿಕ ವೈಭವ, ಮಹತ್ವಪೂರ್ಣ ಇತಿಹಾಸ, ಮನೋವೈಶಾಲ್ಯತೆ ಹಾಗೂ ಜೈನಧರ್ಮದ ಘನತೆ ಇವುಗಳಿಂದ ತಲೆಯನ್ನು ಉನ್ನತಕ್ಕೆ ಎತ್ತಿ ನಿಲ್ಲುವಂಥ ಭಾಗ್ಯವಿದು. ಆಚಾರ್ಯ ಶ್ರೀ ಹೇಮಚಂದ್ರ ಸುರಿಜೀ ಹೇಳುವರು "ಓ ಭಗವಂತ, ನಿನ್ನ ಬಗ್ಗೆ ತಟಸ್ಥ ನಿಲುವು ತಾಳುವುದು ಕಷ್ಟಕರ, ನಿನ್ನ ಬಗ್ಗೆ ಯೋಚನೆ ಅಥವಾ ಸುಳುವು ನೀಡುವುದೇ ನಮಗೆಷ್ಟು ಸಂತೋಷವನ್ನುಂಟು ಮಾಡುವುದು. ಹೀಗಿರುವಾಗ ನಿನ್ನ ಅಧಿಕಾರದ ಯೋಜನೆಯ ಬಗ್ಗೆ ದ್ವೇಷಿಸಲು ಸಾಧ್ಯವೇ?

ಈ ಅಗಾಧವಾದ ವಿಶ್ವ ಸಾಹಿತ್ಯವೇ ತುಂಬು ಮನಸ್ಸಿನಿಂದ ಭಗವಂತನ ಎದುರಿಗೆ ನರ್ತಿಸಲು ಇಚ್ಛಿಸುವುದೋ, ಅತ್ಯಾನಂದದ ಭಾವಪರವಶತೆಯಲ್ಲಿ ಮುಳುಗಿದ ಸಾಧಾರಣ ಮನುಷ್ಯರ ಸ್ಥಿತಿ ಏನಾಗಬಾರದೆಂದು ಯೋಚಿಸಲು ಸಾಧ್ಯವೇ ಇಲ್ಲ. ಯಾಕೆ ಈ ಭಾವಾವೇಶ? ಇದು ತೀರ್ಥಂಕರರ ಸರ್ವಜ್ಞತೆ ಹಾಗೂ ಜೈನ ಯತಿಗಳ ಶುದ್ಧ ಪರಮ ಭಕ್ತಿಯ ತಲ್ಲೀನತೆ, ಇದು ಜೈನ ಧರ್ಮದ ಪ್ರಗತಿಗಾಗಿ ಜೈನ ಗ್ರಹಸ್ಥರ ಮಾನಸಿಕ, ಶಾರೀರಿಕ ಹಾಗೂ ಧನ ಸಂಪತ್ತಿನ ತ್ಯಾಗದ ಫಲವಾಗಿ ಬಂದಿದ್ದು.

ಆದ್ದರಿಂದ ಜೈನರು ಸಂಖ್ಯೆಯ ಗೊಡವೆಗೆ ಹೋಗಬಾರದು. ಪ್ರಚಾರದ ಬಗ್ಗೆ ಮರೆತು ಈ ಧರ್ಮದ ಮಹಾನ್ ಪ್ರಭಾವದ ಬಗ್ಗೆ ಯೋಚಿಸಬೇಕು. ಜೈನ ಧರ್ಮಕ್ಕೆ ಪ್ರಚಾರದ ಅವಶ್ಯಕತೆ ಇಲ್ಲ. ಇದಕ್ಕೆ ಕೇವಲ ಒಳ್ಳೆಯ ನಡತೆ ಹಾಗೂ ಚರಿತ್ರೆಯುಳ್ಳ ವ್ಯಕ್ತಿಗಳ ಅವಶ್ಯಕತೆ ಇದೆ. ಒಬ್ಬನ ಉತ್ತಮ ನಡತೆಯೇ

ಪ್ರಚಾರಕ್ಕೆ ಸಾಕು. ಆದ್ದರಿಂದ ಇನ್ನೊಬ್ಬರನ್ನು ಜೈನ ಮತಕ್ಕೆ ಮತಾಂತರಗೊಳಿಸುವುದಕ್ಕಿಂತ ಒಬ್ಬ ಜೈನ ಸ್ವತಃ ಸನ್ನಡತೆಯಿಂದ ಇದ್ದರೆ ಎಷ್ಟೋ ಒಳಿತು. ಪ್ರತಿಯೊಬ್ಬರು "ಜಿನ" "ಜಿನೇಶ್ವರ" ಆಗಬೇಕು. ಆಗ ಇಡೀ ವಿಶ್ವವೇ ಆತನ ಮುಂದೆ ಕಾಲೂರಿ ಕುಳಿತುಕೊಳ್ಳುವುದು ಹಾಗೂ ಜೈನ ಧರ್ಮವನ್ನು ಪಾಲಿಸುವುದು.

ನಾವು ಕೆಲವು ಜೈನ ಧರ್ಮದವರಲ್ಲದ ವಿದ್ವಾಂಸರಿಂದ ಜೈನ ಧರ್ಮದ ಬಗ್ಗೆ ಅವರ ಅಭಿಪ್ರಾಯಗಳನ್ನು ಕಲೆ ಹಾಕಿದ್ದೇವೆ. ಇವರಲ್ಲಿ ಇಬ್ಬರು ಜನ್ಮತಃ ಯುರೋಪಿಯನ್ನರು ಜೈನ ತತ್ವಜ್ಞಾನದಿಂದ ಆಕರ್ಷಿತರಾಗಿ ಕೊನೆಗೆ ಜೈನ ಧರ್ಮವನ್ನು ಸ್ವೀಕರಿಸಿದರು. ಮಿಕ್ಕಿದ ವಿದ್ವಾಂಸರು ತಮ್ಮ ಧರ್ಮವನ್ನು ಬಿಟ್ಟುಕೊಡದಿದ್ದರೂ, ಜೈನ ಧರ್ಮದ ಮಹತ್ವತೆಯ ಬಗ್ಗೆ ಮನಗಂಡರು. ಓದುಗರು ಜೈನ ಅಥವಾ ಜೈನ ಅಲ್ಲದವರು, ಸ್ವತಃ ತಮ್ಮ ಅಭಿಪ್ರಾಯ ಅನಿಸಿಕೆಗಳಿಂದ ಮುಂದುವರಯಬೇಕಿಲ್ಲ ಎಂದು ಹೇಳುವುದೇ ನಮ್ಮ ಪ್ರಯತ್ನವಾಗಿದೆ. ಭಿನ್ನ ಭಿನ್ನ ಅಭಿಪ್ರಾಯಗಳನ್ನು ಅರಿತುಕೊಂಡು ಅದರ ಮೂಲಕ ಹಾಲಿನ ಕೆನೆಯಿಂದ ಕೆನೆಯನ್ನು ತೆಗೆಯಬೇಕು.

> No happiness is as great as happiness that comes from suffering your sorrows.

ಜೈನ ಧರ್ಮವು ಮಿಕ್ಕ ಧರ್ಮಗಳಿಗಿಂತ ಏಕೆ ಶ್ರೇಷ್ಠವಾಗಿದೆ?

1. **ಡಾ॥ ರಾಜೇಂದ್ರ ಪ್ರಸಾದ್:-** (ಭಾರತದ ಮೊದಲ ರಾಷ್ಟ್ರಪತಿ)

"ಜೈನ ಧರ್ಮವು ಜಗತ್ತಿಗೆ "ಅಹಿಂಸೆ" ಎಂಬ ಉದಾತ್ತ ಉಪದೇಶವನ್ನು ನೀಡಿದೆ. ಬೇರೆ ಯಾವ ಧರ್ಮವೂ ಅಹಿಂಸೆಯ ಮಹತ್ವವನ್ನು ಹೀಗೆ ವಿವರಿಸಿಲ್ಲ, ಅದನ್ನು ಜೈನ ಧರ್ಮವು ನಿಭಾಯಿಸಿದೆ. "ಅಹಿಂಸೆ" ಎಂಬ ಬೋಧನೆಯಿಂದ ಜೈನ ಧರ್ಮವು ಜಾಗತಿಕ ಧರ್ಮವಾಗುವ ಅರ್ಹತೆಯನ್ನು ಪಡೆದಿದೆ".

2. **ಡಾ॥ ರವೀಂದ್ರನಾಥ್ ಠಾಗೂರ್:-** (ನೋಬೆಲ್ ಪಾರಿತೋಷಕ ವಿಜೇತ)

"ಭಗವಾನ್ ಮಹಾವೀರರು ಧರ್ಮವು ಒಂದು ಸತ್ಯವೆಂದು ಅದು ಕೇವಲ ಸಾಮಾಜಿಕ ಸಮುದಾಯವಲ್ಲ ಎಂದು ಸಾರಿದ್ದಾರೆ, ಇದು ನಿಜವಾಗಿಯೂ ಸತ್ಯ".

3. **ಶಿವ ಎ.ಜೆ. ಡುಬೋಯಿಸ್:-**

"ಹೌದು ಪೃಥ್ವಿಯ ಮೇಲೆ ಇರುವ ಏಕೈಕ ಸತ್ಯವಾದ ಧರ್ಮವು ಜೈನ, ಮನುಕುಲದ ಆದಿಕಾಲದ ವಿಶ್ವಾಸ".

4. **ಹೆಚ್. ವಾರನ್, ಲಂಡನ್:-**

"ಬಗೆಹರಿಯದ ಸಮಸ್ಯೆಗಳಿಗೆ ಮಾರ್ಗ ತೋರಿಸಿರುವುದೇ ಜೈನ ಮಾರ್ಗ.

ನನ್ನ ಕಷ್ಟಕರವಾದ ಪ್ರಶ್ನೆಗಳಿಗೆ ಸುಲುಭವಾದ ಉತ್ತರಗಳು ದೊರೆತು ಮಿದುಳಿನ ಪ್ರತಿಯೊಂದು ಕೋನಕ್ಕೂ ತೃಪ್ತಿದೊರೆಯಿತು. ಟೀಕೆಯ ದಾಳಿ ಮಾಡುವವರಿಗೆ ಜಾಣತನದ ಉತ್ತರಗಳು ಶಾಂತ ಪಡಿಸಿವೆ".

5. **ಡಾ|| ಮೌರಿಷ್ ಬ್ಲೂಮ್‌ಫೀಲ್ಡ್** (ಜಾನ್ ಹಾಪ್‌ಕಿನ್ಸ್ ವಿಶ್ವ ವಿದ್ಯಾಲಯ, ಬಾಲ್ಟಿಮೋರ್, ಯು.ಎಸ್.ಎ.)

"ಜನರ ಕಚ್ಚಾಟ ಹಾಗೂ ಜಾಗತಿಕ ಮಹಾತ್ವಾಕಾಂಕ್ಷಿಗಳ ಮರುಭೂಮಿಯಲ್ಲಿ ಜೈನ ಒಂದು ಕುಶಲ ಓಯಾಸಿಸ್ (ದಾಹ ನೀಗಲು ಜಲ ದೊರೆಯುವ ಸ್ಥಳ) ಆಗಿದೆ. ಈ ಜಗತ್ತು ಸಂಪೂರ್ಣ ಜೈನ ಆಗಿದ್ದರೆ ಇದೊಂದು ಶ್ರೇಷ್ಠ ಪ್ರಪಂಚವಾಗಿರುತ್ತಿತ್ತು".

6. **ಸರ್.ಆರ್.ಕೆ. ಷಣ್ಮುಖಮ್ ಚೆಟ್ಟಿ** (ಹಿಂದಿನ ಕೇಂದ್ರ ಕ್ಯಾಬಿನೆಟ್ ಮಂತ್ರಿ, ಭಾರತ ಸರ್ಕಾರ)

"ಜೈನ ಧರ್ಮವು ಸಮರ್ಪಕವಾಗಿ ಭಾರತವನ್ನು ಹಿಡಿದಿದ್ದರೆ ನಮಗೆ ಇನ್ನೂ ಹೆಚ್ಚಿನ ಸಂಯುಕ್ತ ಭಾರತ, ಈಗಿನದಗಿಂತಲೂ ಭವ್ಯವಾದ ಭಾರತವನ್ನು ಹೊಂದಿರುತ್ತಿದ್ದೆವು ಎಂಬುದನ್ನು ನಾನು ವೈಯಕ್ತಿಕವಾಗಿ ನಂಬುತ್ತೇನೆ".

7. **ಜಾರ್ಜ್ ಬರ್ನಾರ್ಡ್ ಶಾ:–**

"ಮಹಾತ್ಮಗಾಂಧಿಯವರ ಪುತ್ರ ದೇವದಾಸ್ ಗಾಂಧಿಯವರೊಡನೆ

ಮಾತನಾಡುತ್ತಾ ಜೈನ ಧರ್ಮ ಬೋಧನೆಗಳು ತಮಗೆ ತುಂಬಾ ಹಿಡಿಸಿದವು. ತಾವು ಇನ್ನೊಮ್ಮೆ ಜನಿಸಿದರೆ ಜೈನ ಧರ್ಮದಲ್ಲಿ ಜನಿಸಲು ಇಷ್ಟಪಡುವೆ ಎಂದು ಹೇಳಿದರು. ಜೈನ್‌ಧರ್ಮದ ಫಲಿತಾಂಶವಾಗಿ ಅವರು ಮಾಂಸ ಹಾಗೂ ಮಧ್ಯ ಇಲ್ಲದ ಅಪ್ಪಟ ಶಾಖಾಹಾರವನ್ನು ಸ್ವೀಕರಿಸಲು ಪ್ರಾರಂಭಿಸಿದರು".

8. **ನ್ಯಾಯಾಧೀಶ ರೇಂಗಣೇಕರ** (ಬಾಂಬೆ ಹೈಕೋರ್ಟ್):–

"ಆಧುನಿಕ ಐತಿಹಾಸಿಕ ಸಂಶೋಧನೆಗಳಿಂದ ನಮಗೆ ತಿಳಿದು ಬಂದಿರುವುದು ಏನೆಂದರೆ ಹಿಂದೂ ಧರ್ಮದಲ್ಲಿ ಬ್ರಾಹ್ಮಣ ಜಾತಿಯು ಉದ್ಭವವಾಗುವ ಮುನ್ನವೇ ನಮ್ಮ ದೇಶದಲ್ಲಿ ಜೈನ ಧರ್ಮವಿತ್ತು".

9. **ಮೇಜರ್ ಜೆ.ಜಿ.ಆರ್.ಪರ್ಲೋಂಗ್:–** (ಸಮಕಾಲೀನ ಧರ್ಮ 242 (ಸಿಜೆ) ಪಿ.18 ಶಾರ್ಟರ್ ಸ್ಟಡೀಸ್ ಇನ್ ಸೈನ್ಸ್)

"ಪ್ರಾಚೀನ ಹಾಗೂ ಅತ್ಯಂತ ಶಿಸ್ತುಬದ್ಧವಾದ, ತತ್ವಜ್ಞಾನವುಳ್ಳ, ನೀತಿ ಶಾಸ್ತ್ರವುಳ್ಳ ಹಾಗೂ ವಿರಕ್ತತೆಯನ್ನು ಒಳಗೊಂಡಿರುವ ಭಾರತದಲ್ಲಿ ವಿಶಾಲವಾಗಿ ಹಬ್ಬಿಕೊಂಡಿರುವ ಜೈನ ಧರ್ಮವು, ಬ್ರಾಹ್ಮಣ ಹಾಗೂ ಬೌದ್ಧ ಧರ್ಮಗಳಿಗಿಂತ ಸುಧಾರಿತವಾದುದು".

10. **ಡಾ|| ಇ.ಥಾಮಸ್:–**

"ಈ ಹಿಂದೆ ಎಂದರೆ 1500 ರಿಂದ 800 ಕ್ರಿ.ಪೂ. ಭಾರತದ ವಾಯುವ್ಯ ಭಾಗದಲ್ಲಿ ಇದ್ದುದು ಅಖಂಡ ಭಾರತದಲ್ಲಿ ಪಸರಿಸಿದ ಪ್ರಾಚೀನ ಹಾಗೂ

ಅತ್ಯಂತ ವ್ಯವಸ್ಥಿತ ಧರ್ಮವು ತತ್ವಜ್ಞಾನ, ನೀತಿಶಾಸ್ತ್ರ, ವಿರಕ್ತತೆಗಳನ್ನು ಹೊಂದಿದ್ದು, ಮೊದಲಿದ್ದ ಬ್ರಾಹ್ಮಣ ಹಾಗೂ ಬೌದ್ಧ ಧರ್ಮಗಳಲ್ಲಿ ಸುಧಾರಣೆಯ ಅಂಶಗಳನ್ನು ಅಳವಡಿಸಿದನು".

11. **ಶ್ರೀ ಕುಮಾರಸ್ವಾಮಿ ಶಾಸ್ತ್ರಿ** (ಹಳೆಯ ಮದ್ರಾಸ್ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು)

"ಜೈನ ಧರ್ಮವು ಸ್ವತಂತ್ರವಾದುದು ಹಾಗೂ ಹಿಂದೂ ಧರ್ಮಕ್ಕಿಂತ ಭಿನ್ನವಾದುದು. "ಸ್ಮೃತಿ ಶಾಸ್ತ್ರಗಳು" ಹಾಗೂ ಅದರ ವ್ಯಾಖ್ಯಾನಗಳಿಗಿಂತ ಸಾಕಷ್ಟು ಪುರಾತನವಾದುದು (ಆಲ್ ಇಂಡಿಯಾ ರಿಪೋರ್ಟ್, 1927, ಮದ್ರಾಸ್ 228, 229 (ಗುಹೆಪ್ಪಾ ವಿ.ಎರಾಮಾ)".

12. **ಡಾ|| ಹರಿಸತ್ಯ ಭಟ್ಟಾಚಾರ್ಯ**

"ಜೈನ ಕೊಡುಗೆಯ ಅಧ್ಯಯನದ ಹೊರತು ಭಾರತದ ತತ್ವಜ್ಞಾನ ಅಧ್ಯಯನ ಅಪೂರ್ಣವೆನಿಸುವುದು ಎಂದು ನನಗನಿಸುತ್ತದೆ".

13. **ಡಾ|| ಎಲ್.ಪಿ.ಟೆನಿಟೋರಿ, ಇಟಲಿ:–**

"ಹೆಚ್ಚೆಚ್ಚು ವೈಜ್ಞಾನಿಕ ಅರಿವು ಮುಂದುವರಿದಂತೆ, ಹೆಚ್ಚುಚ್ಚು ಜೈನ ಬೋಧನೆಗಳು ರುಜುವಾತಾಗುವುದು. ಜೈನ ತತ್ವಗಳು ತುಂಬಾ ಉನ್ನತವಾದವು. ಅದರ ಪ್ರಮುಖ ಬೋಧನೆಗಳು ವಿಜ್ಞಾನದ ಮೇಲೆ ಆಧರಿಸಿವೆ".

14. **ಮೊಹಮ್ಮದ್ ಅಬ್ದುಲ್ ವಹೀದ್ ಖಾನ್:–** (ಹಿಂದಿನ ಪುರಾತನ ವಾಸ್ತುಶಾಸ್ತ್ರ ವಿಭಾಗದ ನಿರ್ದೇಶಕರು, ಆಂಧ್ರಪ್ರದೇಶ)

"ತತ್ವಗಳು, ದೃಢತೆ, ಸತ್ಯವಂತಿಕೆ ಹಾಗೂ ಚಿಂತನೆಗಳ ನಿಜವಾದ ವಿದ್ಯಾಲಯಗಳಿಗೆ ಜೈನ ತತ್ವಜ್ಞಾನಿ ಹತ್ತಿರವಾಗಿರುವರು ಎಂದು ನನಗನಿಸುತ್ತದೆ. ಅವರು ಭವಿಷ್ಯಕ್ಕಾಗಿ ಪರಿಪೂರ್ಣವಾದ ತತ್ವಜ್ಞಾನವನ್ನು ಸಿದ್ಧಗೊಳಿಸಿರುವುದು ನಿಜಕ್ಕೂ ಅಮೂಲ್ಯವಾದುದು".

15. **ಮಹಾತ್ಮಾಗಾಂಧಿ:–**

"ಅಂದು ಉಪದೇಶಗಳಿಗಾಗಿ ಭಗವಾನ ಮಹಾವೀರರ ಹೆಸರು ಘನತೆಯನ್ನು ಹೊಂದಿದ್ದರೆ ಇಂದು ಅದೇ ಉಪದೇಶವನ್ನು ಅಹಿಂಸೆಗಾಗಿ ಅಳವಡಿಸಲಾಗಿದೆ ಎಂಬುದು ನನ್ನ ಅಭಿಪ್ರಾಯ. ಸಂಪೂರ್ಣ ರೂಪವಾಗಿ ಅಹಿಂಸೆಯ ಉಪದೇಶಗಳನ್ನು ಪ್ರಚಾರ ಮಾಡಿರುವ ಹೆಸರು ಮಹಾವೀರರಿಗೆ ದಕ್ಕಬೇಕು".

16. **ಅಲೆಕ್ಸಾಂಡರ್ ಗೋರ್ಡನ್:–**

"ಜೈನ ಧರ್ಮದ ತಳಹದಿಯು ಎಷ್ಟು ಗಟ್ಟಿಯಾಗಿದೆ ಎಂದರೆ, ಅದರ ನಿಜವಾದ ಅನುಯಾಯಿಗಳಿಗೆ ನೀತಿ–ನಿಯಮ, ಧರ್ಮ ಇವುಗಳಿಗಿಂತ ಮಿಗಿಲಾದುದು ಅಹಿಂಸೆಯ ನಿಯಮಗಳು. ಆದ್ದರಿಂದ ವಿಶ್ವಭ್ರಾತೃತ್ವದ ಕಲ್ಪನೆಯ ನಿಜವಾದ ಮೂಲಕರ್ತೃಗಳು ಇವರು ಎಂಬ ಹೆಮ್ಮೆ ಸಾಲದೆ".

17. ಎಸ್.ಗೋಪಾಲಕೃಷ್ಣಮೂರ್ತಿ:–

"ಬೌದ್ಧರು, ಶಾಖಾಹಾರಿಗಳಾದ ಹಿಂದೂ ಬ್ರಾಹ್ಮಣ ಹಾಗೂ ವೈಶ್ಯರನ್ನು ಸೇರಿಸಿಕೊಂಡರು ಎಂದು ನಂಬುವುದು ಸರಿಯಲ್ಲ. ವಾಸ್ತವವಾಗಿ ಜೈನ ಶಾಖಾಹಾರವನ್ನು ಕಟ್ಟು–ನಿಟ್ಟಾಗಿ ಅನುಮೋದಿಸಿದರು. ಕೆಲವು ಭಕ್ತರನ್ನು ಮೆಚ್ಚಿಸಲು ಬೌದ್ಧರು ತಿನ್ನುವರು, ಆದರೆ ಜೈನರು ತಿನ್ನುವುದಿಲ್ಲ".

18. ಸರ್ದಾರ್ ವಲ್ಲಭಾಯಿ ಪಟೇಲ್:– (ಸ್ವತಂತ್ರ ಭಾರದ ಮೊದಲ ಗೃಹಸಚಿವ)

"ಅಹಿಂಸೆಯ ಬೋಧನೆಯನ್ನು ಜಗತ್ತಿನ ತುಂಬಾ ಪ್ರಚಾರಗೊಳಿಸುವುದು ಜೈನರ್ ಕರ್ತವ್ಯ".

19. ಇ.ಡಬ್ಲ್ಯೂ.ಹಾಪ್‌ಕಿನ್ಸ್:–

"ಜೈನ ಧರ್ಮವು ಇತರೆ ಧರ್ಮಗಳ ಸ್ವಂತ್ರವಾದುದು, ಎರಡೂ ತತ್ವಜ್ಞಾನಗಳಲ್ಲಿರುವ ಅಂತರವು ಅಗಾಧವಾದುದು".

20. ಪ್ರೊ.ಟಿ.ಡಬ್ಲ್ಯೂ.ರ್‍ಯಾಸ್ ಡೇವಿಸ್:– (ಎನ್‌ಸೈಕ್ಲೊಪೀಡಿಯಾ ಬ್ರಿಟಾನಿಕಾ ಅಧ್ಯಾಯ XXIX 10ನೇ ಎಡಿ.ಪಿ.6610

"ಈಗ ನಿಶ್ಚಿತವಾಗಿರುವುದು ಏನೆಂದರೆ ಜೈನ ಸಮುದಾಯವು ಬುದ್ಧನ ಕಾಲಕ್ಕಿಂತ ಮುಂಚಿನದು ಹಾಗೂ ಅದನ್ನು ಮತ್ತಿಷ್ಟು ವ್ಯವಸ್ಥಿತಗೊಳಿಸಿದವರು ಸಮಕಾಲೀನರಾದ ಮಹಾವೀರ ವರ್ಧಮಾನ".

21. ನೋಯೆಲ್ ರೆಲ್ಟಿಂಗ್ ಜೈನ್:– (ಎಮರ್ಸನ್ ಕಾಲೇಜ್, ಬಾಸ್ಟನ್, ಜನೇವರಿ 7, 1967)

"ಅನೇಕರು ಬೌದ್ಧಧರ್ಮದಿಂದ ಜೈನ ಧರ್ಮಕ್ಕೆ ಬಂದಿರಬಹುದು. ಇದು ಜೈನಗಿಂತ ಮುಂಚಿನ ವೇದಿಕೆ, ಮಂಕುಮಾಡುವ ಕಲೆಯ ವಿಷಯ ಇಲ್ಲಿ ಮಹತ್ವದ್ದಾಗಿದೆ. ಬೌದ್ಧರು ಸರಿಯಾದ ಮಾರ್ಗದಲ್ಲಿ ಇದ್ದರು. ಸಂಕ್ಷಿಪ್ತದಲ್ಲಿ ಹೇಳಬೇಕೆಂದರೆ ಪವಿತ್ರ ವಿಧಿಗಳಿಂದ ಅವರು ಮಂಕುಮಾಡುವ ವಿದ್ಯೆಯನ್ನು ತೆಗೆದುಹಾಕಿದರೆ ಅಲ್ಲಿ ಜೈನ ಧರ್ಮವು ಕಂಡುಬರುವುದು.

ಜೈನ ಮೊದಲು, ಅದರ ಮೂಲಕ ಬೌದ್ಧ ಧರ್ಮವು ಉದಯಿಸಿತು. ನಮಗೆ ಬುದ್ಧ ಅಥವಾ ಜೀಸಸ್ ಕ್ರೈಸ್ತ ಬಗ್ಗೆ ಸರಿಯಾದ ಸಂಗತಿ ತಿಳಿಯಬೇಕೆಂದರೆ ಜೈನವನ್ನು ಅರಿಯಬೇಕು".

22. ಡಾ॥ ಸತೀಶಚಂದ್ರ ವಿದ್ಯಾಭೂಷಣ:–

"ಜೈನ ಸಾಧುವಿನ ಜೀವನ ಶೈಲಿಯನ್ನು ಎಲ್ಲರೂ ಮೆಚ್ಚುತ್ತಾರೆ. ಆತನು ವ್ರತ ಹಾಗೂ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವನು ಹಾಗೂ ಆತ್ಮಶೋಧನೆ ಮಾಡಲು ಯಾವ ಮಾರ್ಗದಲ್ಲಿ ಸಾಗಬೇಕೆಂಬುದನ್ನು ಜಗತ್ತಿಗೆ ತೋರಿಸುವನು. ಜೈನ ಗೃಹಸ್ಥನ ಜೀವನವೂ ಎಷ್ಟೊಂದು ದೋಷರಹಿತವಾಗಿರುತ್ತದೆ ಎಂದರೆ ಭಾರತವು ಆತನ ಬಗ್ಗೆ ಹೆಮ್ಮೆ ಪಡಬೇಕು".

23. ಡಾ॥ ಹರ್ಮನ್ ಜಾಕೋಬಿ:– (ಇವರ ಸೇಕ್ರೇಡ್ ಬುಕ್ಸ್ ಆಫ್ ದಿ ಈಸ್ಟ್

ಎಡಿ.ಎಫ್.ಮ್ಯಾಕ್ಸ್ ಮ್ಯುಲ್ಲರ್ ಅಧ್ಯಾಯ XXII 1984 ರಲ್ಲಿ ವಿವರಿಸಲಾಗಿದೆ)

"ಜೈನ ಒಂದು ಮೂಲ ವ್ಯವಸ್ಥೆ, ಮಿಕ್ಕ ಎಲ್ಲ ಧರ್ಮಗಳಿಂದ ಸ್ವತಂತ್ರ, ಆದ್ದರಿಂದ ಇದರ ತತ್ವಜ್ಞಾನದ ಚಿಂತನೆ ಹಾಗೂ ಪ್ರಾಚೀನ ಭಾರತದಲ್ಲಿ ಇವರ ಧಾರ್ಮಿಕ ಜೀವನ ಹೇಗಿತ್ತು? ಎಂಬುದರ ಅಧ್ಯಯನ ನಡೆಸುವುದು ಮಹತ್ವಪೂರ್ಣವಾದುದು–ಎಂಬುದು ನನ್ನ ಅಭಿಪ್ರಾಯ".

24. ಡಾ॥ ಹೆರ್ತಾಲ್:–

"ಪ್ರಪಂಚದ ಪ್ರಯೋಜನಕ್ಕಾಗಿ ಜೈನರು ಅನೇಕ ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ".

25. ಡಾ॥ ಎಸ್.ರಾಧಾಕೃಷ್ಣನ್:– (ಭಾರತದ ಪೂರ್ವ ರಾಷ್ಟ್ರಪತಿಗಳು)

"ಜೈನ ಧರ್ಮವು ವೇದಗಳಿಗೂ ಮುನ್ನವೇ ಇದ್ದವು ಎಂದು ಹೇಳಲು ನನಗೆ ಆಶ್ಚರ್ಯವಾಗುತ್ತಿಲ್ಲ".

26. ಲೋಕಮಾನ್ಯ ಬಾಲಗಂಗಾಧರ ತಿಲಕ (ಹಿರಿಯ ಸ್ವಾತಂತ್ರ್ಯ ಹೋರಾಟಗಾರ ನಾಯಕ)

"ಜೈನ ಧರ್ಮವು ಪ್ರಾರಂಭದಿಂದಲೇ ಇತ್ತು ಎನ್ನುವುದನ್ನು ನಾವು ಶಾಸ್ತ್ರ ಹಾಗೂ ವ್ಯಾಖ್ಯಾನಗಳಿಂದ ತಿಳಿದುಕೊಂಡಿದ್ದೇವೆ. ಈ ಸತ್ಯಾಂತವು ನಿರ್ವಿವಾದವಾದುದು ಹಾಗೂ ಇದಕ್ಕೆ ಯಾವುದೇ ಭಿನ್ನಾಭಿಪ್ರಾಯಗಳೂ ಇಲ್ಲ. ಇದಕ್ಕೆ ಐತಿಹಾಸಿಕ ಸಾಕ್ಷ್ಯಾಧಾರಗಳಿವೆ".

27. ಮಿಸೆಸ್ ಆ್ಯನಿ ಬೆಸಂಟ್:– (ಜೈನ ಗೆಜೆಟ್ ಅಧ್ಯಾಯ ನಂ.1 1914 84)

ಡಾ॥ ಜಾಕೋಬ್ ಅವರು ಸ್ಯಾದ್ವದಾ ಮಹಾವಿದ್ಯಾಲಯದ 9ನೇ ವಾರ್ಷಿಕೋತ್ಸವ ಸಮಾರಂಭಕ್ಕೆ ಆಗಮಿಸಿದಾಗ ಆ್ಯನಿ ಬೆಸಂಟ್ ಹೇಳಿದ್ದು: "ಮಹಾವೀರರು ಪ್ರಥಮ ಅಲ್ಲ ಕೊನೆಯ 24ನೇ ಬೋಧಕರು ಹಾಗೂ ಯುರೋಪ್ ಮಿಕ್ಕಿದ 23 ತೀರ್ಥಂಕರರ ಐತಿಹಾಸಿಕ ಹಿನ್ನಲೆಯನ್ನು ವಿವರಿಸಲು ಹಿಂದೇಟು ಹಾಕಿದರು. ಯಾಕೆಂದರೆ ಜೈನ ಹಾಗೂ ಹಿಂದೂ ಧರ್ಮಗಳು ಸಾಕಷ್ಟು ಪುರಾತನ ಇತಿಹಾಸವನ್ನು ಹೊಂದಿತ್ತು".

ಈ ಮೇಲ್ಕಂಡ ಗಣ್ಯರ ಮಾತುಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಆಯ್ದುಕೊಂಡು ಕೊಡಲಾಗಿದೆ. ಹೆಚ್ಚಿನ ಸಂಗತಿಗಳನ್ನು ತಿಳಿಯಬಯಸಿದವರು ಮುಂದೆ ನಮೂದಿಸಿರುವ ಪುಸ್ತಕಗಳನ್ನು ಅಧ್ಯಯನಕ್ಕಾಗಿ ಉಪಯೋಗಿಸಿ–ಕೊಳ್ಳಬಹುದು.

Gurus are They who can give knowedge along with detachment (Vairagya)

1 **CONTRIBUTION OF JAINISM TO INDIAN CULTURE**

(34 Articles of different authors on different topics)

2. JAIN PHILOSPHY

(Comparative Study of Jainism with other Religions"

3. THE JAINA PATH OF PURIFICATION

4. AHIMSA -THE SCEINCE OF PEACE

5.JAINISM IN EARLY MEDIEVAL KARNATAKA

6. GLIMPSES OF JAINISM (8 Articles written by different authors on different topics)

7. THE RELIGION OF AHIMSA

(The essence of Jain Philosophy & Ethics)

8. ESSENCE OF JAINISM -VOL .II

(Discussion of:12 vows of House-Holder, Purification of Heart,Samayak, Tap-Dharma,Samadhimaran)

9. ASCETICS & KINGS IN JAIN RITUAL CULTURE:

Discussion of: 1. Religious Tradition

2. Demonstration of Divine

10. *THE JAINA PHILOSOPHY OF NON-ABSOLUTISM*

(A Critical Edition of Jaina Doctrine)

11. *HARMLESS SOULS*

by W.J.Johnson, Oxford *(Discussion of Karmic Bond age and the liberation of Embodied souls)*

12. GUIDELINES OF JAINISM :

13. A HANDBOOK OF JAINOLOGY

(Many topics are discussed in an Erudite Manner)

14. JAINISM THROUGH SCIENCE

15. COMPENDIUM OF JAINISM

16. STUDY OF JAINISM

17. INDIAN PHILOSOPHY

18. A SOURCE BOOK IN JAINA PHILOSOPHY

19. JAINA VIEW OF LIFE

20. OUTLINES OF JAINISM

Website which has the list of books & all the details:-

www.jainworld.com

http://www.jainworld.com/library/jain_books11.asp

www.jainuniversity.org

http://jainsamaj.org/rpg_site/literature1.php?cat=42&subcat=89

http://www.atmadharma.com/jainbooks.html

http://www.jinvaani.org/jain-books.html

http://www.jainlibrary.org

Website : www.labdhivikramraj.org